“ಬಳೇ ಅಮ್ಮ ಬಳೆ, ಸಾಣೆ ಬಳೆ, ರೇಷ್ಮೇ ಬಳೇ ! ಮುತ್ತೈದೆ ಬಳೇ ! ನಾನಾ ಬಣ್ಣದ ಬಳೇ !” ಎಂದು ಬಳೆಗಾರ ಕೂಗುತ್ತ ಇರುವುದನ್ನು ಕೇಳಿಸಿಕೊಂಡು ಪದ್ಮಬ್ಬೆ ಸೇವಕಿಯನ್ನಟ್ಟಿ ಬಳೆಯ ಸೆಟ್ಟಿಯನ್ನು ತನ್ನ ಮನೆಗೆ ಕರೆಸಿಕೊಂಡಳು.

“ಯಾವೂರೋ?” ಎಂದು ಆಕೆ ಕೇಳಿದಾಗ ಬಳೆಯಸೆಟಿ ತನ್ನ ಹೆಗಲ ಮೇಲಿದ್ದ ಕಂಬಳಿಯನ್ನು ನೆಲದಲ್ಲಿ ಹಾಸಿ ಉಸ್ಸಪ್ಪ ಎಂದು ಆಯಾಸಗೊಂಡವನಂತೆ ಕುಳಿತನು.

“ಹೊಟ್ಟೇಪಾಡು ! ಬರಬೇಕಲ್ಲ !” ಎಂದು ಅರೆಮನಸ್ಸಿನಿಂದ ಮಾತಾಡಿದನು.

“ನನ್ನ ಸೊಸೆಯರಿಗೆ ಬಳೆತೊಡಿಸಬೇಕಾಗಿದೆ. ಮೊದಲು ಬಾಯಾರಿಕೆ ತೀರಿಸಿಕೋ ಅಪ್ಪ” ಎಂದು ಪದ್ಮಬ್ಬೆ ನೀರುಮಜ್ಜಿಗೆಯನ್ನು ತರಿಸಿಕೊಟ್ಟಳು. ಅದನ್ನು ಕುಡಿದು “ನಿನ್ನ ಹೊಟ್ಟೆ ತಣ್ಣಗಿರಲಿ ತಾಯಿ” ಎಂದು ಬಳೆಗಾರ ಹಾರೈಸಿದನು. ಈ ವೇಳೆಗೆ ಪದ್ಮಬ್ಬೆ ಅತ್ತೀ ಎಂದು ಕರೆದಳು. ಸೇವಕಿ ತಂದು ಹಾಸಿದ ರತ್ನಗಂಬಳಿಯ ಮೇಲೆ ಅತ್ತಿಮಬ್ಬೆ ಕುಳಿತಳು. ಅತ್ತಿಮಬ್ಬೆಯ ಹಸ್ತಕ್ಕೆ ಎಂಥದೋ ಎಣ್ಣೆಯನ್ನು ಸುರಿದು ಕೈಗೆ ಬಳಿದುಕೊಳ್ಳುವಂತೆ ತಿಳಿಸಿದನು. ಸುರಸುಂದರಿಯಂತಿದ್ದ ಆಕೆಯ ಅಂಗೈಯನ್ನು ತಾನೇ ತೆಗೆದುಕೊಂಡು ಚೆನ್ನಾಗಿ ತಿಕ್ಕಿ ಮೃದುಗೊಳಿಸಿದನು. ಅನಂತರ ಅಲತೆ ಸರಿ ತಾನೇ ತೆಗೆದುಕೊಂಡು ಚೆನ್ನಾಗಿ ತಿಕ್ಕಿ ಮೃದುಗೊಳಿಸಿದನು. ಅನಂತರ ಅಲತೆ ಸರಿ ಹೊಂದುವಂತೆ ಬಳೆಗಳನ್ನು ಆರಿಸಿದನು. ಆಕೆಯ ಕಣ್ಣಿಗೊಪ್ಪುವಂಥ ಬಣ್ಣವನ್ನು ತೆಗೆದಿಟುಕೊಂಡನು. ಒಟ್ಟೊಟ್ಟಿಗೆ ನಾಲ್ಕು ಬಳೆ ಹಿಡಿದುಕೊಂಡು ಏರಿಸುತ್ತಾ ಆ ಮಾತು ಈ ಮಾತು ಆಡಿ ಆಕೆಯ ಗಮನವನ್ನು ಬೇರೆ ಕಡೆ ಸೆಳೆದು ಹದವಾಗಿ ಬಳೆಗಳನ್ನು ತೊಡಿಸಿದನು. ಮೊದಲೇ ಮೃದುವಾಗಿದ್ದ ಆಕೆಯ ಕೈಗಳು ಮೂಲಿಕೆ ಮಿಶ್ರವಾದ ಎಣ್ಣೆಯಿಂದ ಇನ್ನೂ ಮೃದುವಾದವು. ಕೈತುಂಬ ಬಳೆಗಳನ್ನು ತೊಡಿಸಿದನು.

“ಈ ಕಾಲದ ಬೆಳೆಗಳು ತೊಟ್ಟುಕೊಂಡು ಒಳಗೆ ಹೋಗುತ್ತಿದ್ದಂತೆಯೇ ಹೆಚ್ಚುವುವು” ಎಂದು ಪದ್ಮಬ್ಬೆ ಗೊಣಗಾಡಿದಳು.

“ನಾನು ತಂದಿರುವ ಬಳೆ ಗಟ್ಟಿಯಾಗಿವೆ ತಾಯಿ” ಎಂದು ಬಳೆಗಾರ ಭರವಸೆಯಿಂದ ನುಡಿದನು.

"ಎಲ್ಲರು ಹಾಗೇ ಹೇಳಿ ಕಾಸನ್ನು ಕಸಿದುಕೊಂಡು ಹೊಗುವರು" ಎಂದು ಪದ್ಮಬ್ಬೆ ತನ್ನ ಅನುಭವವನ್ನು ತೋಡಿಕೊಂಡಳು.

"ಪರೀಕ್ಷಿಸಬೇಕು ತಾಯಿ. ನಾನು ಇಲ್ಲಿಗೆ ಬಂದಿರುವುದೇ ಇದೇ ಮೊದಲು."

"ಯಾವುರಿಂದ ಬಂದಿರುವಿರಿ?"

"ಬಹುದೂರ ತಾಯಿ. ಜಮಖಂಡಿ ಹತ್ತಿರ ಮುದುವೊಳಲು."

"ಅಬ್ಬ ಎಷ್ಟು ದೂರದಿಂದ ಬಂದಿರುವಿರಿ, ಬಳೆಯನ್ನೂ ಹೊತ್ತುಕೊಂಡು ನಡೆದಿರಾ?"

"ಒಂದು ಎತ್ತಿದೆ. ಅದರ ಮೇಲೆ ಬಳೆಯ ಚೀಲ ಹಾಕಿಕೊಂಡು ನಾನು ನನ್ನ ಹಿರಿಯಮಗ ಹಾಗೂ ಕಿರಿಯಮಗ ಬಂದಿರುವೆವು."

"ನಿಮ್ಮ ಹೆಸರೇನು ಸೆಟ್ಟಿ?"

"ಜಿನವಲ್ಲಭ ತಾಯಿ."

"ಓಹೋ ಜೈನರೇನು?"

"ಅಹುದಮ್ಮ."

"ಬಳೆ ಚೆನ್ನಾಗಿವೆ ತಾನೆ ?"

"ಅನುಮಾನ ಪಡಬೇಡಿ. ನಾನು ಕಡುಬಡವನಾದರೂ ಸುಳ್ಳು ಮಾತ್ರ ಹೇಳುವುದಿಲ್ಲ. ಒಳ್ಳೆ ಬಳ್ಳೆ ತರುವೆನು. ಒಳ್ಳೆ ಹೇಳುವೆನು. ತಮ್ಮಂಥ ಪುಣ್ಯಾತ್ಮರಿಗೆ ಮೋಸಮಾಡಿ ಮತ್ತೆ ಇತ್ತ ಬರಲಾದೀತೆ?" ಎಂದು ಬಳೆಯಸೆಟ್ಟಿ ತಿಳಿಸಿದನು. ಈ ವೇಳೆಗೆ ಅತ್ತಿಮಬ್ಬೆಗೆ ಬಳೆ ತೊಟ್ಟಾಗಿತ್ತು. ಆಕೆ ಒಳಗೆ ಹೋದಳು. ಗುಂಡುಮಬ್ಬೆ ಬಂದು ಬಳೆಯಸೆಟ್ಟಿ ಮುಂದೆ ಕುಳಿತುಕೊಂಡಳು. ಈಕೆಯನ್ನು ನೋಡಿ ಬಳೆಗಾರ ಅವಾಕ್ಕಾದನು.

"ಏನಮ್ಮ, ನನ್ನ ಬಳೆಗಳೂ ಒಡೆದು ಹೋದುವೆ?" ಎಂದು ಬೆಪ್ಪಾಗಿ ಕೇಳಿದನು.

"ಹೌದು ಸೆಟ್ಟಿ" ಎಂದು ಗುಂಡುಮಬ್ಬೆ ಹುಸಿನಗುತ್ತ ಹೇಳಿದಳು.

“ನೋಡಿದೇನಪ್ಪ ! ಇವಳಿಗೆ ಈಗ ತೊಡಿಸಿದೆ. ಒಳಗೆ ಹೋಗಿ ಮತ್ತೆ ಹಿಂದಿರುಗಿರುವಳು” ಎಂದು ಪದ್ಮಬ್ಬೆ ಸೋಜಿಗಗೊಂಡವಳಂತೆ ನುಡಿದಳು. ಬೆಳೆಗಾರನಿಗೆ ಆಶ್ಚರ್ಯವೂ ಆಯಿತು. ಸಂಕಟವೂ ಆಯಿತು.

“ಬರಗಾಲದಲ್ಲಿ ಅಧಿಕಮಾಸವೆನ್ನುವಂತೆ  ಬಡತನದಲ್ಲಿ ನನ್ನ ಬಳೆಗಳೂ ಸಿಡಿದವಲ್ಲ! ಮತ್ತೆ ಪುಕ್ಕಟೆಯಾಗಿ ತೊಡಿಸುವೆನು. ಈ ಬಾರಿಯೂ ಒಡೆದರೆ ನನ್ನ ಬಳೆಯ ರಾಸಿಯನ್ನೆಲ್ಲ ಬೀದಿಗೆ ತೂರಿಬಿಡುವೆನು!” ಎಂದು ಜಿನವಲ್ಲಭ ಪಣತೊಟ್ಟು ಇದ್ದುದರಲ್ಲಿ ಅತ್ಯುತ್ತಮವಾದ ಬಳೆಗಳನ್ನು ತೊಡಿಸಿದನು.

“ಇಂದು ಸಂಜೆ ಊಟಕ್ಕೆ ನೀವೂ ನಿಮ್ಮ ಮಕ್ಕಳೂ ಇಲ್ಲೇ ಬಂದು ಬಿಡಿ” ಎಂದು ಪದ್ಮಬ್ಬೆ ತಿಳಿಸಿದಳು.

“ನೀವು ತುಂಬ ಒಳ್ಳೆಯವರಂತೆ ಕಾಣುತ್ತಿರುವಿರಿ. ಹಾಳಾದ ನನ್ನ ಗ್ರಹಚಾರ. ನಿಮ್ಮ ಮನೆಯಲ್ಲೇ ಹೀಗಾದುದು. ಬಳೆಗಳೇನೋ ಒಳ್ಳೆಯವೇ. ನನ್ನ ಗ್ರಹಗತಿ ಮಾತ್ರ ಕೆಟ್ಟದ್ದು” ಎಂದು ಸಪ್ಪೆಮೋರೆ ಹಾಕಿಕೊಂಡು ನುಡಿದನು. ಈ ವೇಳೆಗೆ ಗುಂಡು ಮಬ್ಬೆಯೂ ಬಳೆ ತೊಟ್ಟಾಗಿತ್ತು.

“ಊಟಕ್ಕೆ ಬರುವಿರಿ ತಾನೇ?”

“ಆಗಬಹುದು ತಾಯಿ” ಎಂದು ಜಿನವಲ್ಲಭ ಹೊರಡಲನುವಾದನು. ಪದ್ಮಬ್ಬೆ ಹಣವನ್ನು ಕೊಟ್ಟಳು.

“ಒಡೆದ ಬಳೆಗೂ ಹಣ ಕೊಟ್ಟಿರುವಿರಲ್ಲ ! ನೀವೇನೋ ಕೊಟ್ಟಿರುವಿರಿ, ನಾನು ಮುಟ್ಟಿದರೆ ದೇವರು ಮೆಚ್ಚಿಯಾನೆ!” ಎಂದು ಅವನು ಅರ್ಧ ಹಣವನ್ನು ಹಿಂದಿರುಗಿಸಲು ಬಂದಾಗ,

“ಅವರಿಬ್ಬರೂ ಅವಳಿ ಜವಳಿಗಳು. ನನ್ನ ಸೊಸೆಯರು” ಎಂದು ಪದ್ಮಬ್ಬೆ ಮುಗುಳ್ನಕ್ಕಳು.

“ಹೌದೇ ತಾಯಿ? ಪತ್ತೆ ಹಚ್ಚಲು ಸಾಧ್ಯವೇ ಇಲ್ಲವಲ್ಲ ! ಏನು ನಿಮ್ಮ ಸೋದರ ಸೊಸೆಯಂದಿರೆ?”

“ನನ್ನ ಮಗ ನಾಗದೇವನ ಹೆಂಡತಿಯರು.”

“ಇಬ್ಬರನ್ನೂ ಒಬ್ಬರಿಗೇ ತಂದಿರುವಿರಿ !”

“ನಾವು ಒಂದು ಹೆಣ್ಣು ಕೇಳಲು ಹೋದೆವು. ಅಕ್ಕತಂಗಿ ಇಬ್ಬರೂ ನಮ್ಮ ಮಗನನ್ನೇ ವರಿಸಬೇಕೆಂದು ಹಟ ಹಿಡಿದರು ! ನನ್ನ ಮನಸ್ಸೂ ಕನಗಿ ಹಾಗೇ ಆಗಲಿ ಎಂದು ಒಪ್ಪಿಕೊಂಡೆ. ನನ್ನ ಮಗ ನಾನುಗುಳಿದ ಎಂಜಲನ್ನೂ ದಾಟುವುದಿಲ್ಲ. ಸೊಸೆಯರೂ ಚಿನ್ನದಂಥವು. ಅವು ನನಗೆ ಮಕ್ಕಳಿದ್ದ ಹಾಗೇ ಇವೆ ಸೆಟ್ಟಿ” ಎಂದು ಪದ್ಮಬ್ಬೆ ಸ್ತ್ರೀ ಸಹಜವಾದ ಒಂದು ಭಾಷಣ ಮಾಡಿಬಿಟ್ಟಳು.

“ಅಮ್ಮ ನೀವು ತುಂಬ ಅದೃಷ್ಟವಂತರು !ಯಶಸ್ವತಿ ಮತ್ತು ಸುನಂದೆಯಂತಿರುವ ಸೊಸೆಯರನ್ನು ತಂದಿರುವಿರಿ !” ಎಂದು ಬಳೆಗಾರ ಸೋಜಿಗಗೊಂಡು ಹೊರಟನು.

ಸೂರ್ಯಾಸ್ತಕ್ಕೆ ಎರಡು ಘಳಿಗೆ ಇರುವಾಗ ಜಿನೇಂದ್ರವಲ್ಲಬ ತನ್ನ ಮಕ್ಕಳಿಬ್ಬರನ್ನು ಕಟಿಕೊಂಡು ದಲ್ಲಪನ ಮನ್‌ಗೆ ಬಂದನು. ಇವರಿಗಾಗಿ ದಲ್ಲಪನೂ ಕಾಯುತ್ತಿದ್ದನು. ದಲ್ಲಪ ಮಹಾಂತ್ರಿಯಾಗಿದ್ದರೂ ಮಾನವೀಯತೆಗೆ ತಿಲಾಂಜಲಿ ಕೊಟ್ಟಿರಲಿಲ್ಲ. ತನ್ನವರು ನನ್ನವರು ಎಂಬ ಮಾತು ಹಾಗಿರಲಿ ಊಟದ ಹೊತ್ತಿನಲ್ಲಿ ಯಾರು ಬಂದರೂ ತಪ್ಪದೆ ಊಟಕ್ಕಿಡಿಸುತ್ತಿದ್ದನು. ತಾನು ಮಾಡುವಂಥ ಸೊಗಸಾದ ಊಟವನ್ನೇ ಬಂದವರಿಗೂ ಮಾಡಿಸುತ್ತಿದ್ದನು. ಅತಿಥಿಗಳು ಜೈನರಾದರಂತೂ ಸಹಪಂಕ್ತಿ ಭೋಜನ ತಪ್ಪುತ್ತಿರಲಿಲ್ಲ. ಪದ್ಮಬ್ಬೆ ಗಂಡನಿಗೆ ಅನುರೂಪಗಳಾದ ಹೆಂಡತಿ. ಗಂಡನ ಮಾನವೀಯತೆಗೆ ಈಕೆ ಸಂಪನ್ನತೆಯ ಒಪ್ಪ ಹಾಕಿ ತನ್ನ ಸಂಸಾರವನ್ನು ಸಂಸ್ಕೃತಿಯ ಆಗರವನ್ನಾಗಿ ಮಾಡಿದ್ದಳು. ಹೊಸದಾಗಿ ಬಂದಿರುವ ಸೊಸೆಯರನ್ನು ಕೇಳುವಂತೆಯೇ ಇಲ್ಲ. ರತ್ನವೃಷ್ಟಿಯನ್ನು  ಕರೆದ ನಾಗಮಯ್ಯನ ಮೊಮ್ಮಕ್ಕಳು ಇವರು !

“ಬನ್ನಿ ಜಿನೇಂದ್ರವಲ್ಲಭರೆ” ಎಂದು ದಲ್ಲಪ ಚಿರಪರಿಚಿತನಂತೆ ಅವರನ್ನು ಸ್ವಾಗತಿಸಿದನು. ಬಂದ ಮೂವರಿಗೂ ಕಾಲು ತೊಳೆಯಲು ನೀರು ಕೊಡಿಸಿದನು. ಅವರು ತೊಳೆಯುತ್ತಿದ್ದಂತೆಯೇ ಒರಿಸಲು ದಲ್ಲಪ ತಾನೇ ವಸ್ತ್ರವನ್ನು ಕೊಟ್ಟನು. ಮಹಾಮಂತ್ರಿಯ ಶಯಾದಾಕ್ಷಿಣ್ಯವನ್ನು ಕಂಡು ಜಿನೇಂದ್ರವಲ್ಲಭ ಬೆರಗಾದನು.

“ಇವರಿಬ್ಬರೂ ನಿಮ್ಮ ಮಕ್ಕಳೇ?”

“ಹೌದು ಸ್ವಾಮೀ. ದೊಡ್ಡವನು ರೇಚಣ್ಣ, ಈ ಮಗು ರನ್ನ.”

“ಇಷ್ಟೇ ಮಕ್ಕಳೋ ಇನ್ನೂ ಇವೆಯೋ ?”

“ನಡುವಲವನು ಮಾರಯ್ಯ. ಮನೆಯಲ್ಲಿದ್ದಾನೆ” ಎಂದು ಜಿನೇಂದ್ರ ವಲ್ಲಭ ತಿಳಿಸಿದನು. ರಾಚಯ್ಯ ಆಜಾನುಬಾಹು, ದೃಢಕಾಯ, ರನ್ನ ಕೇವಲ ವರ್ಷ ಹತ್ತು ತುಂಬಿದ ಹುಡುಗ, ಮುದ್ದಾದ ಮುಖದಲ್ಲಿ ಧ್ರುವತಾರೆಗಳಂಥ ಹೊಳಪಿನ ಬೊಗಸೆಗಂಗಳು ! ಈ ಮೂವರೂ ಬಡವರಾದರೂ ದೈನ್ಯತೆಯಿರಲಿಲ್ಲ. ನಿಸ್ಪೃಹರಾಗಿ ಸ್ವಾಭಿಮಾನಿಗಳಾಗಿ ಕಂಡು ಬಂದರು. ಮೂವರನ್ನೂ ಒಳಮನೆಗೆ ದಲ್ಲಪ ಕರೆದೆಯ್ದನು. ಪಂಕ್ತಿಯಲ್ಲಿ ಕೂರಿಸಿಕೊಂಡನು. ಚಿನ್ನದ ತಟ್ಟೆಯಲ್ಲಿ ಊಟಕ್ಕೆ ಬಡಿಸಿದರು. ಬಿಳಿ ಜೋಳದ ರೊಟ್ಟಿಗಳನ್ನಿಟ್ಟು ಹಲವು ತೆರನಾದ ಪಲ್ಯಗಳನ್ನು ಬಡಿಸಿದರು. ಎಳೆ ಮಿಂಚಿನಂಥ ಕಾಸಿದ ತುಪ್ಪವನ್ನು ಅತ್ತಿಮಬ್ಬೆ ತಂದು ಎಲ್ಲರಿಗೂ ಹಾಕಿದಳು. ಇನ್ನು ಊಟ ಮಾಡಬಹುದು ಎಂದು ದಲ್ಲಪ ತಿಳಿಸಿದ ಮೇಲೆ ಎಲ್ಲರೂ ಪ್ರಾರಂಭಿಸಿದರು. ಈ ರಾಜ ಭೋಜನ ಕಂಡು ರನ್ನನ ಆನಂದಕ್ಕೆ ಪಾರವೇ ಇಲ್ಲ. ರೊಟ್ಟಿಗಳನ್ನು ತಿಂದಾದ ಮೇಲೆ ಸಣ್ಣಕ್ಕಿ ಅನ್ನವಿಟ್ಟು ತಿಳಿಸಾರವನ್ನು ಹಾಕಿದರು. ಒಂದೆರಡು ಸೌಟು ತುಪ್ಪವನ್ನು ಕರೆದನು. ಕೂಡಲೆ ಅತ್ತಿಮಬ್ಬೆ ಅಲ್ಲಿಗೆ ಬಂದು ‘ಏನು ಬೇಕು ತಮ್ಮ?” ಎಂದು ವಾತ್ಸಲ್ಯದಿಂದ ಬೆಸಗೊಂಡಳು.

“ಸಾರಿಗೆ ಕಾರ ಹೆಚ್ಚಾಯಿತು ಅಕ್ಕ, ತುಸು ತುಪ್ಪ ಬೇಕು” ಎಂದು ನಿರ್ದಾಕ್ಷಿಣ್ಯವಾಗಿ ಕೇಳಿದನು. ಜಿನೇಂದ್ರ ವಲ್ಲಭ ಅಪಮಾನಗೊಂಡವನಂತೆ ರನ್ನನ ಮೇಲೆ ಕೆಂಗಣ್ಣನ್ನು ಬಿಟ್ಟು ದುರುಗುಟ್ಟಿಕೊಂಡು ನೋಡಿದನು. ದಲ್ಲಪ ಇದನ್ನು ಗಮನಿಸದೇ ಇರಲಿಲ್ಲ. ಅತ್ತಿಮಬ್ಬೆ ಬಂಗಾರದ ಲೋಟದಲ್ಲಿ ತುಪ್ಪವನ್ನು ತಂದಾಗ “ಅಮ್ಮಯ್ಯ, ಮಕ್ಕಳಿಗೆ ದೊಡ್ಡವರೊಡನೆ ಊಟಕ್ಕೆ ಕುಳಿತರೆ ಅಂಕೆ ಆತಂಕ ಹೆಚ್ಚು. ಆ ಮಗುವನ್ನು ಒಳಗೆ ಕರೆದುಕೊಂಡು ಹೋಗಿ ಏನೇನು ಬೇಕೋ ಕೇಳಿ ಮುದ್ದಿಸಿ ಊಟಮಾಡಿಸಮ್ಮ” ಎಂದು ದಲ್ಲಪ ಸೊಸೆಗೆ ತಿಳಿಸಿದನು. ಅತ್ತಿಮಬೆ ನಸುನಗುತ್ತ ರನ್ನನ ಕೈ ಹಿಡಿದುಕೊಂಡು ಬಾ ಮಗು ಎಂದು ಅಕ್ಕರೆಯಿಂದ ಕರೆದೊಯ್ದಳು. ಕಾಮಧೇನುವನ್ನು ಹಿಂಬಾಲಿಸುವ ಎಳೆಗರುವಿನಂತೆ ರನ್ನ ಆಕೆಯನ್ನು ಹಿಂಬಾಲಿಸಿದನು. ಅಡಿಗೆ ಮನೆಯಲ್ಲಿ ತಟ್ಟೆಹಾಕಿ ಅವನನ್ನು ಕೂರಿಸಿದಳು. ರನ್ನ ಒಮ್ಮೆ ಸುತ್ತಲೂ ಕಣ್ಣಾಡಿಸಿದನು ! ಕಲ್ಪವೃಕ್ಷದ ಅಡಿ ಕುಳಿತವನಂತೆ

ಹಿಗ್ಗಿ ಹೋದನು. ಅತ್ತಿಮಬ್ಬೆಗೆ ರನ್ನನ ಮೇಲೆ ಅನಿರೀಕ್ಷಿತವಾದ ವಾತ್ಸಲ್ಯ ಉಕ್ಕಿ ಬಂದಿತು. "ತಮ್ಮ, ನಿನ್ನ ಹೆಸರೇನಪ್ಪ" ಎಂದು ತಲೆ ನೇವರಿಸುತ್ತ ಬೆಸಗೊಂಡಳು.

"ನನ್ನ ಹೆಸರು ರನ್ನ" ಎಂದು ಅವನು ಠೀವಿಯಿಂದ ನುಡಿದನು.

"ಅಯ್ಯೋ ನನ್ನ ಚಿನ್ನ, ಎಷ್ಟು ಮುದ್ದಾಗಿದೆ ನಿನ್ನ ಹೆಸರು !" ಎಂದು ಅತ್ತಿಮಬ್ಬೆ ಅವನ ಗಲ್ಲದ ಮೇಲೆ ಕೈಯಿಕ್ಕಿ ಅನಂತರ ಲಟಿಗೆ ತೆಗೆದಳು.

"ಏನು ಬೇಕಾದರೂ ಕೇಳು ಮಗು. ನಾಚಿಗೆಪಟ್ಟುಕೊಳ್ಳಬೇಡ. ನಿಪ್ಪಟ್ಟು ಬೇಕೆ? ಚಕ್ಕುಲಿ ಕೊಡಲೆ? ಸೇಂತೊಳೆ ತರಲೆ? ತಂಬಿಟ್ಟು? ಲಾಡು, ಚಿರೋಟಿ, ಕಾರಸಾವಿಗೆ . . . .?" ಎಂದು ಅತ್ತಿಮಬ್ಬೆ ಹೇಳುತ್ತ ಹೋದಂತೆ ರನ್ನನಿಗೆ ದಿಕ್ಕೇ ತೋಚದಂತಾಯಿತು. ! ತನ್ನ ಮನೆಯಲ್ಲಿ ಮೂರು ಹೊತ್ತು ಜೋಳದ ರೊಟ್ಟಿ ಆಯಿತು ಇವನಾಯಿತು. ನಂಚುವುದಕ್ಕೆ ಹುಚ್ಚೆಳ್ಳಿನ ಚಟ್ನಿ ಬಿಟ್ಟು ಇನ್ನೊಂದನ್ನು ಕಾಣ. ಹಾಲು ಮೊಸರು ಅಪರೂಪವೋ ಅವರೂಪ ! ಆದರೆ ಈ ದಿನ ಏನು ಬೇಕು ಎಂದು ಕೇಳುವುದರ ಜೊತೆಗೆ ಬಗೆ ಬಗೆಯ ಕರಿದ ಪದಾರ್ಥಗಳ ಪಟ್ಟಿಯನ್ನೇ ಮುಂದಿಟ್ಟಿರುವರು. ಯಾವುದು ಬೇಕೋ ಹೇಳು ಎಂದು ಆರಿಸಲು ಅವಕಾಶವನ್ನು ಕೊಟ್ಟಿರುವರು. ಕಡುಬಡವನನ್ನು ಚಿನ್ನದ ನಾಣ್ಯಗಳಿರುವ ಹಗೇವಿನಲ್ಲಿ ಕೂರಿಸಿದರೆ ಹೇಗೋ ಹಾಗೆ ರನ್ನನಿಗೆ ಕಕರುಮಕರಾಯಿತು !

"ಏನು ಬೇಕು ಹೇಳು ತಮ್ಮ" ಎಂದು ಅತ್ತಿಮಬ್ಬೆ ಮತ್ತೊಮ್ಮೆ ಬೆಸಗೊಂಡಳು.

"ನಿನಗೆ ಏನು ಬೇಕೋ ಅದೆಲ್ಲ ಇಟ್ಟುಬಿಡು ಅಕ್ಕ" ಎಂದು ರನ್ನ ನುಡಿದಾಗ ಅತ್ತಿಮಬ್ಬೆಗೆ ಕರುಣೆ ಉಕ್ಕಿಬಂದು "ಗುಂಡು, ಮಾಡಿರುವ ಪದಾರ್ಥಗಳಲ್ಲಿ ಮಾದರಿ ಯಾಗಿ ಎಲ್ಲವನ್ನೂ ತಂದುಬಿಡು ಅಮ್ಮ" ಎಂದು ಹೇಳಿದಳೋ ಇಲ್ಲವೋ ಇನ್ನೊಂದು ಕೋಣೆಯಿಂದ ತಂದುಬಿಡು ಅಮ್ಮ" ಎಂದು ಹೇಳಿದಳೋ ಇಲ್ಲವೋ ಇನ್ನೊಂದು ಕೋಣೆಯಿಂದ ಗುಂಡುಮಬ್ಬೆ ತಟ್ಟೆಯ ತುಂಬ ಕರಿದ ಪದಾರ್ಥಗಳನ್ನು ತಂದು ರನ್ನನ ಮುಂದೆ ಇಟ್ಟು ಅವನ ನಿಷ್ಕಳಂಕವಾದ ಮೋಹಕ ರೂಪವನ್ನು ನೋಡುತ್ತ ನಿಂತಳು. "ಅಕ್ಕ ಈ ಮಗು ಎಷ್ಟು ಮುದ್ದಾಗಿದೆ !" ಎಂದು ತಾನೂ ಅವನ ತಲೆಯನ್ನು ನೇವರಿಸಿ ತಾಯ್ಗರುಳಿನ ಹಂಬಲವನ್ನು ತೀರಿಸಿಕೊಂಡಳು. ಅತ್ತಿ ಮಬ್ಬೆ ಮತ್ತು

ಗುಂಡುಮಬ್ಬೆಯರು ಅಕ್ಕರೆಯನ್ನು ಕರೆಯುತ್ತ ರನ್ನನಿಗೆ ಕೇಳಿದುದನ್ನೆಲ್ಲ ಬಡಿಸಿದರು. ಸಾಕುಸಾಕೆನ್ನುವಷ್ಟು ಹಾಲು ತುಪ್ಪವನ್ನು ಸುರಿದು ಅವನನ್ನು ಬೆರಗುಗೊಳಿಸಿದರು.

"ರನ್ನ, ಏನಾದರೂ ಓದಾತ್ತಾ ಇದ್ದೀಯ ?" ಅತ್ತಿಮಬ್ಬೆ ಲೋಕಾಭಿರಾಮವಾಗಿ ಕೇಳಿದಳು. ಆ ಮಾತು ಕಿವಿಯ ಮೇಲೆ ಬೀಳುತ್ತಿದ್ದಂತೆ ರನ್ನನ ಕಣ್ಣು ಹನಿಗೂಡಿತು. ಒಂದೆರಡು ತೊಟ್ಟು ಕಂಬನಿ ಸಿಡಿದು ಬಂದು ಅವನ ಕೆನ್ನೆಯ ಮೇಲೆ ಸ್ಪಷ್ಟವಾಗಿ ಕಾಣುವಂತೆ ಮೇಲಿದ್ದವನಂತೆ ನಗುನಗುತ್ತ ಇದ್ದ ಮಗು ಇದ್ದಕ್ಕಿದ್ದಂತೆ ಆಯತಪ್ಪಿ ನೆಲಕ್ಕೆ ಬಿದ್ದವನಂತೆ ಅಳುತ್ತಿರುವುದನ್ನು ಕಂಡು ಅತ್ತಿಮಬ್ಬೆಯ ಹೆಂಗರುಳು ಚುರುಕ್ಕೆಂದಿತು. ಗುಂಡು ಎಂದು ತಂಗಿಯನ್ನೂ ಕರೆದು ಏಕೋ ಏನೋ ಮಗು ಅಳುತ್ತಿದೆ ಯಲ್ಲಮ್ಮ ಎಂದು ಕಳವಳದಿಂದ ನುಡಿದಳು. ಗುಂಡುಮಬ್ಬೆ ಅಲ್ಲಿಗೆ ಬಂದು ಸೆರಗಿನಿಂದ ಅವಬ ಕಂಬನಿಯನ್ನು ಒರಸಿ "ರನ್ನ, ನನ್ನ ಪುಟ್ಟು, ಏನು ಬೇಕಪ್ಪ" ಎಂದು ಅಕ್ಕರೆಯಿಂದ ಬೆಸಗೊಂಡಳು.

"ಅಲ್ಲ, ಏನು ಓದುತ್ತಿರುವೆ ಮಗು ಎಂದು ನಾನು ಕೇಳಿದೆ. ಕೂಡಲೆ ಮುಟ್ಟಿದರೆ ಮುನಿಯಂತೆ ಮುರುಟಿಕೊಂಡು ಕಂಬನಿ ಮಿಡಿದುಬಿಟ್ಟನು !" ಎಂದು ಏನೋ ಪ್ರಮಾದವಾದವಳಂತೆ ಅತ್ತಿಮಬ್ಬೆ ಸಪ್ಪೆಮೋರೆ ಹಾಕಿದಳು.

"ರನ್ನ, ನಿನಗೆ ಓದಲು ಮನಸ್ಸಿಲ್ಲವೇನಪ್ಪ ? ಓದಬೇಕೆಂದು ಮನೆಯಲ್ಲಿ ಬಯ್ಯುವ ಅತ್ತಿಮಬ್ಬೆ ಪ್ರಶ್ನೆಗಳ ಸುರಿಮಳೆ ಸುರಿಸಿದಳು.

ಭಕ್ಷ್ಯಭೋಜ್ಯಗಳ ತಾರಾಳಿಗಳನ್ನು ಅತ್ತಿಮಬ್ಬೆ ಹಿಂದೆ ರನ್ನನ ಮುಂದಿಟ್ಟಿದ್ದಳು. ಈಗ ಅದಕ್ಕಿಂತ ಹಿತವಾದ ಪ್ರಶ್ನಾವಳಿಗಳನ್ನು ಅವನ ಮುಂದಿಟ್ಟಿರುವಳು ! ಗುಂಡು ಮಬ್ಬೆಯೂ ಬಂದು ಮುದ್ದಿಸಿ ಅವನ ಅಂತರಂಗವನ್ನು ಬಯಲಿಗೆಳೆಯಲು ಪ್ರಯತ್ನಿಸಿದಳು. ರನ್ನನಿಗೆ ಈ ವಾತ್ಸಲ್ಯದಿದಿರು ಮುಚ್ಚುಮರೆಮಾಡಲು ಸಾಧ್ಯವಾಗಲಿಲ್ಲ. ಗದ್ಗದಿಸುತ್ತ ತನ್ನ ಗೋಳನ್ನು ಹೇಳಲು ಪ್ರಾರಂಭಿಸಿದನು. ಸಂಕಟ ಉಕ್ಕಿಬಂದು ಮಾತಿನ ಸರಣಿಗೆ ಆತಂಕವನ್ನುಂಟುಂಮಾಡುತ್ತಿತ್ತು. ಒಂದೊಂದೇ ಮಾತನ್ನು ಆರಿಸಿಕೊಂಡು ಈ ಹೆಮ್ಮಕ್ಕಲು ಸಂದರ್ಭವನ್ನು ಊಹಿಸಬೇಕಾಯಿತು. ಹೇಳು ಮಗು ಹೆದರಬೇಡ ಎಂದು ಮತ್ತೆ ಮತ್ತೆ ಧೈರ್ಯ ಹೇಳಿ ಅವನ ಸಮಸ್ಯೆಯನ್ನು ಕಂಡುಕೊಳ್ಳಬೇಕಾಯಿತು !

“ನಾನು. . . .ಓದುವೆನು. . .ಆದರೆ ನಮ್ಮ ತಂದೆ ಬೇ. . .ಬೇಡ ಬೇಡ ಎಂದು ಬಯ್ಯುವರು” ಎಂದು ಹೇಳಬೇಕಾದರೆ ರನ್ನನಿಗೆ ಸಾಕು ಬೇಕಾಯಿತು.

“ಏಕೆ ಮಗು? ಓದಿದರೆ ಬೇಡವೆನ್ನುತ್ತಾರೆಯೇ? ಕಾರಣ?” ಎಂದು ಅತ್ತಿಮಬ್ಬೆ ಸೋಜಿಗದಿಂದ ಕೇಳಿದಳು.

“ನಾವು ಬಡವರು. ಓಜರಿಗೆ ದುಡ್ಡೆಲ್ಲಿ ತರಲಿ? ಹೊಟ್ಟೆಗೇ ತಾಪತ್ರಯ !” ಎಂದು ನಮ್ಮ ತಂದೆ ಸದಾ ಗೊಣಗುವರು ಎಂದು ಹೇಳಬೇಕಾದರೆ ರನ್ನ ಪ್ರಸವವೇದನೆಯನ್ನು ಅನುಭವಿಸಿದನು ! ಇವನ ಮಾತನ್ನು ಕೇಳಿ ಅತ್ತಿಮಬ್ಬೆಗೂ ಗುಂಡುಮಬ್ಬೆಗೂ ಮರುಕವಾಯಿತು. ಎಲ್ಲ ಮಕ್ಕಳಂತೆ ಈ ಮಗುವಿಗೂ ಪಾಠಶಾಲೆ ಒಂದು ತಲೆನೋವಾ ಗಿರಬಹುದೆಂದು ಅವರಿಬ್ಬರೂ ಮೊದಲು ಊಹಿಸಿದ್ದರು. ಅವನ ಸಮಸ್ಯೆ ಇವರನ್ನೂ ಚಿಂತೆಗೊಳಗು ಮಾಡಿತು. ಅತ್ತ ರನ್ನ ತನ್ನ ತಾಪತ್ರಯಗಳನ್ನು ಈ ಅನ್ನಪೂರ್ಣೆಯರು ನಿವಾರಿಸಹುದೆಂಬ ಭರವಸೆಯಿಂದ “ಅಕ್ಕ, ನನ್ನನ್ನು ಇಲ್ಲೇ ಇರಿಸಿಕೊಂಡು ಬಿಡಿ ಅಕ್ಕ. ನೀವು ಹೇಳಿದಂತೆ ಕೇಲಿಕೊಂಡಿರುವೆನು” ಎಂದು ದೈನ್ಯನಾಗಿ ಮೊರೆಯಿಟ್ಟನು.

“ಹಾಗೇ ಮಾಡು ತಮ್ಮ. ನಿಮ್ಮ ತಂದೆಯನ್ನು ಕೇಳಿ ನಮ್ಮನೆಯಲ್ಲೇ ಇದ್ದುಬಿಡು” ಎಂದು ಅತ್ತಿಮಬ್ಬೆ ಅಶ್ವಾಸನೆಯಿತ್ತರೂ ರನ್ನ ನಿರಾಸೆಗೊಂಡವನಂತೆ ಖಿನ್ನನಾದನು.

“ನಾವು ಹೇಳಿದ ಹಾಗೆ ಮಾಡಬಹುದಲ್ಲ” ಎಂದು ಗುಂಡುಮಬ್ಬೆ ಪರಿಹಾರ ಸೂಚಿಸಿದಳು.

“ನಾನೇ ಕೇಳಿದರೆ ನಮ್ಮ ತಂದೆ ಒಪ್ಪುವರೋ ಇಲ್ಲವೋ !” ಎಂದು ರನ್ನ ಗೊಣಗಾಡಿದನು. ಈಗ ನಿಜವಾಗು ಅತ್ತಿಮಬ್ಬೆಗೂ ಯೋಚನೆಯಾಯಿತು. ಮೊನ್ನೆ ತಾನೆ ಮನೆಗೆ ಬಂದಿರುವ ಸೊಸೆಯರು. ಈಗಾಗಲೆ ಕಂಡವರ ಮಗುವನ್ನು ನಮ್ಮಲ್ಲೇ ಇರಲಿ ಎಂದು ಹೇಳಲು ಒಂದು ಕಡೆ ಸಂಕೋಚ ಇನ್ನೊಂದು ಕಡೆ ಭಯ. ಹಾಗೆ ನಿಸ್ಸಹಾಯಳಾಗಿ ಗುಂಡುಮಬ್ಬೆಯ ಮುಖ ನೋಡಿದಳು. “ಅಕ್ಕ, ನಿನ್ನ ಇಂಗಿತವೇನು ತಿಳಿಸಿಬಿಡು. ಈ ಮಗುವನ್ನು ಇರಿಸಿಕೊಳ್ಳುವ ಆಸೆಯಿದ್ದರೆ ಹೇಳು, ಬೆಟ್ಟವೇ ಅಡ್ಡ ಬಂದರೂ ನಾನು ನಿನ್ನ ಪರವಾಗಿರುವೆನು” ಎಂದು ಗುಂಡುಮಬ್ಬೆ ಧೈರ್ಯ ಹೇಳಿದಳು.

“ಅದಲ್ಲ ಗುಂಡು ನನ್ನ ಯೋಚನೆ. ನಾವಾಗೇ ಈ ಮಗುವನ್ನು ಬಿಟ್ಟು ಹೋಗು ಎಂದು ಹೇಗಮ್ಮ ಇವರ ತಂದೆಯನ್ನು ಕೇಳುವುದು !” ಎಂದು ಅತ್ತಿಮಬ್ಬೆ ಔಚಿತ್ಯ ಅನೌಚಿತ್ಯಗಳ ಮಧ್ಯೆ ಓಲಾಡಿದಳು.

“ಅತ್ತೆಗೆ ಹೇಳೋಣ ಬಿಡು ಅಕ್ಕ. ಓದುವ ಮಕ್ಕಳನ್ನು ಈ ಪ್ರಾಯದಲ್ಲೇ ಕೆಲಸಕ್ಕೆ ಹಾಕಿದರು ಏನು ಗತಿ!” ಎಂದು ಗುಂಡುಮಬ್ಬೆ ಆತಂಕಗೊಂಡು ನುಡಿದಳು.

“ರನ್ನ ನೀನು ನಮ್ಮಲೇ ಉಳಿದುಕೋ. ಓದುವಂತಿದ್ದರೆ ಏರ್ಪಾಟು ಮಾಡಿಕೊಡುವೆನು. ಎಷ್ಟು ಹನವಾದರೂ ಖರ್ಚಾಗಲಿ, ಹೆದರಬೇಡ ನಾನು ಕೊಡುವೆನು” ಎಂದು ಅತ್ತಿಮಬ್ಬೆ ನುಡಿದಾಗ ರನ್ನನ ಕಣ್ಣು ಮತ್ತೊಮ್ಮೆ ಹನಿಯಿತು! ಮಕ್ಕಳ ಕೈ ತೊಳೆಯುವಂತೆ ಅತ್ತಿಮಬ್ಬೆ ಅವನ ಕೈ ತೊಳೆದಳು. ಗುಂಡುಮಬ್ಬೆ ಸೀರೆಯ ಸೆರಗಿನಿಂದ ಅವನ ಮೂತಿಯನ್ನು ಒರೆಸಿದಳು. ತಾಯ್ಗರುಳಿದಿರು ರನ್ನ ಹಸುಗೂಸಾಗಿ ಹೋದನು. ಅವರ ಉಪಚಾರಕ್ಕೆ ಅಡ್ಡಿಪಡಿಸದೆ ಜಿನಬಿಂಬದಂತೆ ಕುಳಿತನು !

ಇತ್ತ ದಲ್ಲಪನ ಪಂಕ್ತಿ, ಊಟವಾದ ಮೇಲೆ ಪಡಶಾಲೆಯಲ್ಲಿ ತಾಂಬೂಲಕ್ಕೆ ಕುಳಿತಾಗ ಮೆತ್ತನೆ ಹಾಸಿದ್ದ ಬೆತ್ತದ ಆಸನಗಳಲ್ಲಿ ಕುಳಿತು ಜಿನೇಂದ್ರ ವಲ್ಲಭನಿಗೆ ಚಣಕಾಲ ಸ್ವರ್ಗಸುಖವನ್ನು ಉಂಡಂತಾಯಿತು.

“ರಾಚಯ್ಯನಿಗೆ ಮದುವೆಯಾಗಿದೆಯೆ?” ದಲ್ಲಪ ಪ್ರಶ್ನಿಸಿದನು.

“ಆಗಿದೆ ಸ್ವಾಮಿ, ಈಗಾಗಲೆ ಆರು ಮಕ್ಕಳು” ಎಂದು ಜಿನೇಂದ್ರವಲ್ಲಭ ಬೇಸರ ದಿಂದ ನುಡಿದನು.

“ಬಹಳ ಸಂತೋಷ. ವಂಶ ಚೆನ್ನಾಗಿ ವೃದ್ಧಿಯಾಗಲಿ. ಇನ್ನೊಬ್ಬ ಮಗನಿಗೆ ಮದುವೆ?”

“ಅವನ ಮದುವೆಯೂ ಕಳೆದ ಬೇಸಿಗೆಯಲ್ಲಿ ಮಾಡಿದೆ ಸ್ವಾಮಿ.”

“ಚಿಕ್ಕಮಗ ಇನ್ನು ಓದುತ್ತಿದ್ದಾನೇನೊ?”

“ನಮಗೆಲ್ಲ ಓದುಗೀದು ಎಲ್ಲಿ ಸ್ವಾಮಿ, ಬಡತನದ ಬವಣೆ. ಅವನಿಗೂ ಕೆಲಸದ ಪರಿಚಯವಾಗಲೆಂದು ಜೊತೆಯಲ್ಲಿ ಕರೆದು ತಂದಿರುವೆನು.”

“ಛೆ! ಪಾಪ ಇನ್ನೂ ಹಸುಗೂಸು. ಬಿಸಿಲಲ್ಲಿ ಬಾಡಿಸಬಾರದು” ಎಂದು ದಲ್ಲಪ ಕರುಣೆ ತೋರಿದನು.

“ಜಿನೇಂದ್ರವಲ್ಲಭರೆ, ನಮ್ಮ ಮನೆಯಲ್ಲಿ ಅತಿಥಿಗಳು ಬಂದಾಗ ಮೊದಲು ಉಟಕ್ಕಿಡುವೆವು. ಅನಂತರ ಅವರ ಕಷ್ಟಸುಖವನ್ನು ವಿಚಾರಿಸುವೆವು. ನಮ್ಮ ತಂದೆ ಕಾಲದಿಂದ ಈ ಸಂಪ್ರದಾಯ ನಡೆದುಕೊಂಡು ಬಂದಿದೆ. ಅತಿಥಿಗಳೆಂದರೆ ದೇವರ ಸಮಾನ. ತಾವು ಶ್ರಾವಕರು ನನ್ನಿಂದ ಏನಾದರೂ ಸಹಾಹ ಬೇಕಿದ್ದರೆ ನಿಸ್ಸಂಕೋಚವಾಗಿ ಕೇಳಿಕೊಳ್ಳಿ” ಎಂದು ದಲ್ಲಪ ಮರುಕದಿಂದ ನುಡಿದನು.

“ಸ್ವಾಮಿ, ಉಂಡೂ ಹೋದ ಕೊಂಡು ಹೋದ ಎಂದಾಗಬಾರದು” ಜಿನೇಂದ್ರ ವಲ್ಲಭ ಸಂಕೋಚಂದಿಂದ ನುಡಿದನು.

“ತಾವು ಅತಿಥಿಗಳು. ಅಪರೂಪಕ್ಕೆ ಬಂದಿರುವಿರಿ. ಈಗ ನನ್ನ ಕೈ ನಡೆಯುತ್ತಿದೆ. ನಿಮಗೆ ಏನಾದರೂ ಉಪಕಾರ ಮಾಡಬಲ್ಲೆ. ಏನುಬೇಕೊ ತಿಳಿಸಿ” ಎಂದು ದಲ್ಲಪ ಬಲವಂತ ಮಾಡಿದನು.

“ತಾಮ್ಮಂಥ ಉದಾರಿಗಳು ಅಪರೂಪ ಸ್ವಾಮಿ. ಮಹಾಮಂತ್ರಿಗಳಾದ ತಾವು ನಮ್ಮಂಥವರನ್ನು ಜೊತೆಯಲ್ಲಿ ಕೂರಿಸಿಕೊಂಡು ಉಣ್ಣುವುದಕ್ಕಿಂತ ಬೇರೆ ಉಪಕಾರ ಯಾವುದಿದೆ ಸ್ವಾಮಿ ? ಬಂಗಾರದ ತಣಿಗೆಯಲ್ಲಿ ಮಹಾಮಂತ್ರಿಯ ಜೊತೆಗೆಲ್ಲಿ ಊಟುಮಾಡುವ ಯೋಗ್ಯ ಸಾಮಾನ್ಯವಾದುದೆ. ! ” ಎಂದು ಜಿನೇಂದ್ರವಲ್ಲಭ ಹಿಗ್ಗಿ ನುಡಿದನು.

“ಅದೆಲ್ಲ ಆಯಿತಲ್ಲ. ನಮಗೂ ನಿಮಗೂ ಅಂತಸ್ತಿನಲ್ಲಿ ಭೇದವಿರಬಹುದು. ಆದರೆ ಜಾತಿಯಲ್ಲಿ ಭೇದವಿದೆಯೇ ? ಜೀವಕೋಟಿಯ ಮೇಲೆಲ್ಲ ದಯಾವರ್ಷವನ್ನು ಸುರಿಸ ಬೇಕೆಂದು ಮಹಾವೀರಪ್ರಭು ಸಾರಲಿಲ್ಲವೆ. ? ಈ ದಿನ ಶ್ರೀಮಂತನಾಗಿರುವೆನು. ನಾಳೆ ಏನಾಗಿವುದೋ ಕಂಡವರಾರು ? ಕೈ ನಡೆಯುವಾಗ ಮಹಾವೀರಪ್ರಭುವಿನ ಹೆಸರಿನಲ್ಲಿ ನಾಲ್ಕು ಜನಕ್ಕಾದರೂ ಉಪಕಾರ ಮಾಡಬೇಡವೆ. ? ನಾನು ಉಪಕಾರ ಮಾಡ ಬೇಕೆಂಬುದು ಲೋಕ ಕಲ್ಯಾಣಕ್ಕಾಗಿ ಅಲ್ಲ.

ಕೇವಲ ನನ್ನ ಶ್ರೇಯಸ್ಸಿಗಾಗಿ ತಮ್ಮಂಥ ಬಡವರಿಗೆ ಏನಾದರೂ ಮಾಡಬೇಕೆಂದು ಪ್ರೇರಣೆಯಾಗಿದೆ. ನನ್ನ ಮನಸ್ಸಿನ ಭಾರ ಇಳಿಯಬೇಕಾದರೆ ನೀವು ಏನಾದರೂ ಕೇಳಿಕೊಳ್ಳಿ " ಎಂದು ಮಹಮಂತ್ರಿ ಅಂಗಲಾಚಿದನು. ಜಿನೇಂದ್ರವಲ್ಲಭ ಕರುಣೆಯ ಕಲ್ಪತರುವಿನಿದಿರು ಕರಗಿಹೋದನು . ಏನು ಕೇಳ ಬೇಕೋ ಏನು ಬಿಡಬೇಕೋ ಅವನಿಗೆ ತೋಚದಾಯಿತು. ಚಿಕ್ಕಮಗನಿಗೆ ಏನಾದರೂ ದಾರಿ ಮಾಡಿಕೊಡಬೇಕೆಂದು ಅಂತರಂಗದಲ್ಲಿ ಅಭಿಲಾಷೆ ಇಣುಕಿತು.

"ಸ್ವಾಮಿ ನನ್ನ ಹಿರಿಯಮಕ್ಕಳಿಬ್ಬರೂ ಕೈಗೆ ಬಂದಿರುವರು. ಅವರ ಅನ್ನ ಅವರು ದುಡಿದುಕೊಳ್ಳುವರು. ಕಿರಿಯಮಗ ವಿಲ್ಲಕ್ಷಣ ವ್ಯಕ್ತಿ. ಅವನನ್ನು ತಮ್ಮ ಮಡಿಲ್ಲಲ್ಲಿ ಹಾಕುವೆನು. ಏನಾದರೂ ಮಾಡಿ ಅವನಿಗೆ ಒಂದುದಾರಿ ತೋರಿಸಬೇಕು. ಜೊತೆಗೆ ಅವನಿಂದ ಏನಾದರೂ ದುಡಿಸಿಕೊಂಡು ನಮ್ಮ ಬಡತನದ ಬೇಗೆ ಹಿಂಗುವಂತೆ ಅಷ್ಟೋ ಇಷ್ಟೋ ಸಹಾಯ ಮಾಡಬೇಕು." ಎಂದು ಜಿನೇಂದ್ರವಲ್ಲಭ ಒಂದೇ ಏಟಿಗೆ ಎರಡು ಹಣ್ಣು ಉದುರವಂತೆ ಯೋಜನೆ ಹಾಕಿದನು.

"ತಮ್ಮ ಚಿಕ್ಕಹುಡುಗ ಅಂದರೆ ನಮ್ಮೊಡನೆ ಊಟಕ್ಕೆ ಕುಳಿತ ಮಗು ತಾನೆ. ?"

"ಅಹುದು ಸ್ವಾಮಿ. "

"ಛೇ ! ಅವನಿಗೆ ಏನು ಕೆಲಸ ಕೊಡಲಾದೀತು ? ಹಸುಮಕ್ಕಳನ್ನು ಕೆಲ್ಲಸಕ್ಕೆ ಹಚ್ಚಿದರೆ ದೇವರು ತಾನೆ ಮೆಚ್ಚಿಯಾನೆ ? ಏಕೆ ಇಲ್ಲಿರುವ ದೊಡ್ಡ ಮಗನನ್ನೇ ಕೆಲಸಕ್ಕೆ ಸೇರಿಸಿ ಬಿಡಿ. ಸೈನ್ಯದಲ್ಲಿ ಏನಾದರೂ ಕೊಡಿಸಬಹುದು.

"ನಾವು ತುಂಬ ತಾಪತ್ರಯದಲ್ಲಿದ್ದೇವೆ. ಸ್ವಾಮಿ. ಈತನನ್ನು ಕೆಲಸಕ್ಕೆ ಸೇರಿಸಿದರೆ ಬರುವ ಸಂಬಳ ಅವನಿಗೇ ಸಾಲದಗುವುದು. ಹೆಚ್ಚೆಂದರೆ ಅವನ ಹೆಂಡತಿ ಮಕ್ಕಳನ್ನು ಪಟ್ಟಣದಲ್ಲಿ ಸಾಕಬಹುದಷ್ಟೇ. ಮುದುಕರ ಗತಿ? "

"ತಾವು ಹೇಳುವುದೂ ಸರಿಯೆ. ಆರೆಯ ಮಗುವಿಗೆ ಏನು ಕೆಲಸ ಕೋಡೋಣ" ಎಂದು ದಲ್ಲಪ ಚಿಂತೆಗೊಳಗಾದನು.

"ತಾವು ಏನಾದರೂ ಕೊಡಿ. ಅವನು ಉಪಯಕ್ತ ಎಂದು ತಿಳಿದಾಗ ಸಂಬಳ ಕೊಡಿ. ಅದುವರೆವಿಗೂ ನಾವು ಸಂಬಳವನೇ ಕೇಳುವುದಿಲ್ಲ."

"ಅವನು ಮುಂದೆ ಏನಾಗಬೇಕೆಂದು ಕನಸು ಕಟ್ಟಿರುವಿರಿ ? ಅದನ್ನಾದರೂ ಹೇಳಿ" ಎಂದು ದಲ್ಲಪ ಜಿನೇಂದ್ರವಲ್ಲಭನನ್ನು ಓರೆಗೆ ಹಚ್ಚುವಂತೆ ನೋಡಿದನು.

"ಬಡವರ ಕನಸೂ ಒಂದು ಕನಸೇ ! ಕನಸು ಕಟ್ಟುವುದಕ್ಕಾದರೂ ನಮಗೆ ವಿಶ್ರಾಂತಿಯಿದೆಯೇ ? ನಮ್ಮ ಕನಸೆಲ್ಲ ಹೊಟ್ಟೆ ಬಟ್ಟೆಯ ಕನಸು. ಇವೆರಡನ್ನೂ ಬಿಟ್ಟು ಮೂರನೇ ಯೋಚನೆ ನಮ್ಮ ಬಳಿ ಸುಳಿದೀತೆ ?" ಎಂದು ತನ್ನ ಬಡತನದ ಬವಣೆಯನ್ನು ಅವರ ಮುಂದಿಟ್ಟನು.

"ಆಯಿತು. ಇಂದಿನಿಂದ ರನ್ನ ನಮ್ಮವನು. ಮನೆಯಲ್ಲಿ ಹೆಂಗಸರನ್ನು ವಿಚಾರಿಸಿ ಅವನ ಸಂಬಳ ಸಾರಿಗೆ ಗೊತ್ತುಮಾಡವೆನು. ತಾವು ಮತ್ತೆ ಈ ಕಡೆ ಯಾವಾಗ ಬರುವಿರಿ ?"

" ಒಂದು ವಾರ ಸುತ್ತಾಡಿ ಊರಿಗೆ ಹಿಂದಿರುಗುವಾಗ ಇಲ್ಲಿ ಬಂದು ಹೋಗುವೆವು."

"ನಾಳೆ ನಮ್ಮಲ್ಲೇ ಊಟಮಾಡಿ ಮುಂದಿನ ಪ್ರಯಾಣ ಮಾಡಬಹುದು." ಎಂದು ತಿಳಿಸಿ ದಲ್ಲಪ ಮೇಲೆದ್ದನು.

ಜಿನೇಂದ್ರವಲ್ಲಭ ರನ್ನನನ್ನು ಕರೆದು ತನ್ನ ಯೋಜನೆಯನ್ನು ವಿವರಿಸಿದನು. ರನ್ನನ ಮುಖವರಳಿತು. ತನ್ನ ಸಮಸ್ಯೆಗಳೆಲ್ಲ ಬಗೆಹರಿಯಿತೆಂದು ಒಳಗೊಳಗೇ ಹಿಗ್ಗಿದನು.

ನಾಗದೇವನ ಬೆಳಗಿನ ಊಟವಾಯಿತು. ಅತ್ತಿಮಬ್ಬೆ ಅಂತಃಪುರದಲ್ಲಿ ತನ್ನ ಗಂಡನಿಗೆ ಸುಣ್ಣ ಹಚ್ಚಿದ ಎಲೆಯನ್ನು ಮಡಿಚಿ ಬಾಯಿಗಿಡುತ್ತ.

"ಅಲ್ಲ ತಮ್ಮನ್ನು ಏನೋ ಪ್ರಾರ್ಥಿಸಬೇಕೆಂದಿರುವೆನು. ಇಲ್ಲ ಅನ್ನದೆ ನಡೆಸಿ ಕೊಡುವಿರಾ ?" ಎಂದು ಮನಕರಗುವಂತೆ ಪ್ರಾರ್ಥಿಸಿದಳು. ಆಕೆ ಮನೆಗೆ ಬಂದಾಗಿ ನಿಂದ ಗಂಡನನ್ನು ಏನೂ ಕೇಳಿರಲಿಲ್ಲ. ಒಡವೆ ವಸ್ತ್ರ ಆಕೆಗೆ ಹೊರಲಾರದಷ್ಟಿತ್ತು. ಅಪ್ಪಿತಪ್ಪಿ ಏನಾದರೂ ಬೇಕಾದರೆ ಪದ್ಮಬ್ಬೆಗೆ ತಿಳಿಸುತ್ತಿದ್ದಳು. ಹೀಗಾಗಿ ನಾಗದೇವನಿಗೆ ತನ್ನ ಮಡದಿಯರು ತನ್ನನ್ನು ಏನೂ ಕೇಳುವುದಿಲ್ಲವಲ್ಲ ಎಂಬ ಕೊರಗು ಇದ್ದೇ ಇತ್ತು. ಅವಳ ಬಾಯಿಂದ ಪ್ರಾರ್ಥನೆ ಬಂದುದೇ ತಡ ಅವನಿಗೆ ಸೋಜಿಗವೂ ಆಯಿತು, ಸಂತಸವೂ ಅಯಿತು.

“ಅತ್ತಿ ನನ್ನಲ್ಲಿ ನಿನ್ನ ಪ್ರಾರ್ಥನೆಯೆ ? ನ್ನಿನ ಇಂಗಿತವನ್ನು ಅರ್ಥಮಾಡಿಕೊಂಡು ಈವರೆವಾಗಾಗಲೆ ನಾನೇ ನಿನ್ನ ಇಷ್ಟಾರ್ಥವನ್ನು ನೆರವೇರಿಸಬೇಕಾಗಿತ್ತು. ನಾನು ರಣ ಗಲಿಯೇ ಹೊರತು ರಸಿಕನಲ್ಲ ರಮಣಿ !” ಎಂದು ನಾಗದೇವ ಕೈ ಕೈ ಹಿಸುಕಿಕೊಂಡನು.

“ನಾಥ ತಾವು ನೊಂದು ಕೊಳ್ಳುವಂಥ ಪ್ರಮಾದ ಏನಾಗಿದೆ ? ಈ ಮನೆಗೆ ಬಂದಾಗಿನಿಂದ ನಾನು ಮತ್ತು ಗುಂಡು, ಕಲ್ಪತರುವಿನ ಅಡಿ ವಾಸಿಸುವಂತೆ ಹಯಾಗಿರುವೆವು. ತಮ್ಮ ತಾಯಿ ನಮಗೂ ತಾಯಾಗಿ ದಿನವೂ ಅಕ್ಕರೆರೆಯಿಂದ ಕರೆಯುತ್ತಿರುವರು. ತಮ್ಮ ತಂದೆ ನಮ್ಮ ಪಾಲಿಗೆ ನಮ್ಮ ಅಜ್ಜನಂತೆ ಇರುವರು ! ತಾವು ರಸಿಕರಲ್ಲವೆ ?ರಸಿಕ ರಲ್ಲವೇ ಹೋಗಿದ್ದರೆ  ಎರಡು ಹೆಣ್ಣುಗಳನ್ನು ಸದಾ ನಗಿಸಿಕೊಂಡು ಹೋಗಲು ಸಾಧ್ಯ ವಾಗಿತ್ತಿತ್ತೇ ?”

“ಪ್ರಿಯೆ, ನೀನು ಹಾಗು ಗುಂಡು ಇಬ್ಬರೂ ಗರತಿಯ ಮಕ್ಕಳು. ಅಷ್ಟೇ ಅಲ್ಲ ನೀವಿಬ್ಬರೂ ಗರತಿಯರು. ಮಿಗಿಲಾ ದೈವಭಕ್ತರು. ದೈವಭಕ್ತರೆಲ್ಲ ಎಲ್ಲಿದ್ದರೂ ಕಲ್ಪತರುವಿನ ಅಡಿಯಲ್ಲೇ ಇದ್ದೇವೆಂದು ತಿಳಿದುಕೊಂಡು ತೃಪ್ತರಾಗುವರು. ಅಷ್ಟೇ ಹೊರತು ನಿಮ್ಮಿಬ್ಬರ ಆನಂದಕ್ಕೆ ನಾನು ಕಾರಣಲ್ಲ. ನನ್ನಿಂದ ಏನಾದರೂ ಅಪಚಾರ ವಾದಾಗ ನಿಮ್ಮಿಬ್ಬರೂ ತೆಪ್ಪಗಿರಬಾರದು. ಆಗಾಗ ಎಚ್ಚರಿಸಿ ನನ್ನನ್ನು ತಿದ್ದುತ್ತಿರಬೇಕು. ನಾನು ಲೋಕವೇ ಕಂಡಿರುವಂತೆ ಒರಟರಮಲ್ಲ ! ಏನೋ ಪೂರ್ವಪುಣ್ಯದಿಂದ ಕಲ್ಪಲತೆಗಳಿಗೆ ನಲ್ಲನಾಗಿರುವೆನು” ಎನ್ನುತ್ತ ಅತ್ತಿಮಬ್ಬೆಯ ಕೆನ್ನೆಯನ್ನು ಮೃದುವಾಗಿ ಚಿವುಟಿದನು.

“ಮುಖ್ಯ ವಿಷಯವನೇ ಮರೆಸಿಬಿಟ್ಟರಲಿಲ್ಲ. ನೀವು ಒರಟರಮಲ್ಲರು, ಜೊತೆಗೆ ಮಾತಿನಮಲ್ಲರೂ ಅಹುದು” ಎಂದು ಅತ್ತಿಮಬ್ಬೆ ನಗೆಯಾಡಿದಳು.

“ಸರಿ ಮುಖ್ಯ ವಿಷಯಕ್ಕೆ ಬಾ ನಲ್ಲೆ” ಎಂದು ಅವನೂ ನಸುನಕ್ಕನು.

“ ನೋಡಿ ನಮ್ಮಲ್ಲೇ ಬಬ್ಬ ಹೊಸ ಹುಡುಗ ಬಂದಿರುವನಲ್ಲ. . . .?”

“ ಅಹುದು. ನೀರಿನ ಮನೆಯಲ್ಲಿ ವಸ್ತ್ರವನ್ನು  ತಂದುಕೊಟ್ಟನಲ್ಲ ಅವನು ತಾನೆ ?”

“ ಅಹುದು ಅವನೇ. ”

“ ಏನು ಅವನ ವಿಷಯ ?”

" ತುಂಬ ಬಂಡವರಂತೆ. ಅವರ ತಂದೆ ಅವನನ್ನು ನಮ್ಮ ಮನೆಯಲ್ಲಿ ಬಿಟ್ಟಿರುವರು. . . . " ಎಂದು ತುಸು ತಡೆದಳು.

"ಇಷ್ಟೇತಾನೇ ! ಇದಕ್ಕೆಲ್ಲ ನನ್ನ ಕೇಳುವುದೇ ? ಒಳಮನೆಯ ವಿಚಾರವೇನಿದ್ದರೂ ನಿಮ್ಮದೆ."

"ಹೇಳುವುದಕ್ಕಾದರೂ ಪುರುಸೊತ್ತು ಕೊಡಿ ಅಂದ್ರೆ. "

" ಅರೆ ನೀನೇ ಮಾತಾಡುವುದನ್ನು ನಿಲ್ಲಿಸಿದೆ. ಅನಂತರ ನಾನು ಮುಕ್ತಾಯ ಹಾಡಿದೆ. ಹಗಿದ್ದರೆ ಏನೋ ಸಂದರ್ಭ ಗಹನವಾದಂತಿದೆಯಲ್ಲ ! ಏನಿದ್ದರೂ ಹೇಳಿಬಿಡು.ನಿನ್ನ ಮಾತನ್ನು ಖಂಡಿತ ನಡೆಸಿಕೊಡುವೆನು" ಎಂದು ನಾಗದೇವ ಭರವಸೆ ಕೊಟ್ಟನು.

"ಆ ಹುಡುಗನಿಗೆ ಓದಬೇಕೆಂಬ ಆಸೆ. ಬಡವರು ಓದಿಸಲಾರದೆ. ಅವನನ್ನು ನಮ್ಮ ಮನೆಯಲ್ಲಿ ಕೆಲಸಕ್ಕೆ ಸೇರಿಸಿರುವರು. ತುಂಬ ಚುರುಕಾಗಿರುವನು. ಚೆನ್ನಾಗಿ ಓದಲೂ ಬಹುದು. ಪಾಪ ಅನುಕೂಲವಿಲ್ಲದೆ ಪೇಚಾಡುತ್ತಿರುವನು. ತಾವು ಮನಸ್ಸು ಮಾಡಿದರೆ. .. .."

"ಏನು ನಾನು ಅವನಿಗೆ ಪಾಠ ಹೇಳಿಕೊಬೇಕೆ ? ಆಯಿತು ನಿನ್ನ ಮಾತು ಕೇಳಿ ಒಪ್ಪಿಕೊಂಡರೆ ಅವನು ಬದುಕಿದಂತೆಯೇ ! ಏನಾದರೂ ನಾನು ಹೇಳಿದ್ದನು ಕಲಿ ಯದೇ ಹೋದನೆಂದರೆ ನನ್ನ ಒಂದೇ ಒದೆತನಕ್ಕೆ ನೆಗೆದು ಬೀಳುವನು. ಅತ್ತಿ.ನಿನ್ನ ಗಂಡನನ್ನು ಮೃದು ಹೃದಯದ ಕೋಮಲಾಂಗನೆಂದು ನೀನು ತಿಳಿದಿರುವೆ. ನನ್ನನ್ನು ಕಂಡರೆ ಸೈನಿಕರೆಲ್ಲ ತರಗುಟ್ಟುವರು. ಮಹಾರಾಜರು ನನ್ನೊಡನೆ ಮಾತುಡುವಾಗ ಎಚ್ಚರವಾಗೇ ಮಾತಾಡುವರು. ನನ್ನನ್ನು ಕಂಡರೆ ಸರಸವಾಡುವ ಜೀವಗಳು ಎರಡೇ ಎರಡು. ನೀನೊಬ್ಬಳು ಗುಂಡು ಬಬ್ಬಳು" ಎಂದು ನಾಗದೇವ ಮೀಸೆಯನ್ನು ಠೀವಿ ಯಿಂದ ತಿರುಕೊಂಡನು.

"ತಮ್ಮ ಪರಾಕ್ರಮವನ್ನು ಕಂಡೇ ತಾನೇ ನಾನೂ ನನ್ನ ತಂಗಿಯೂ ಒಲಿದು ಬಂದಿರುವುದು" ಎಂದು ಅತ್ತಿಮಬ್ಬೆ ಗಂಡನ ಮೀಸೆಯ ಇನ್ನೊಂದು ತುದಿಯನ್ನು ತಿರುವಿನ ಅವನ ಠೀವಿಯಲ್ಲಿ ಸಮತೋಲನ ಉಂಟುಮಾಡಿದಳು !

"ಅತ್ತಿ. ಅವನಿಗೆ ನಾನು ಪಾಠ ಹೇಳಲಾರೆ. ಅದೂ ಅವನ ಹಿತದಿಂದಲೇ."

“ ನಿಮ್ಮನ್ನು ಪಾಠ ಹೇಳು ಎಂದವರಾರು ?”

“ ಮತ್ತೆ ಇನ್ನೇನು ಮಾಡಬೇಕು ಹೇಳು.”

“ಅವನನ್ನು ಯಾವುದಾದರೂ ಗುರುಕುಲಕ್ಕೆ ಸೇರಿಸಿಬಿಡಿ. ಓದಿಕೊಳ್ಳಲಿ. ಮುಂದೆ ತಮಗೆ ಹೆಸರು ತರುವನು . . . . ನೋಡಿ ನಮ್ಮ ರನ್ನ ಹಾಲ್‌ಗಲ್ಲದ ಹಸುಳೆ ! ಪಾದರಸದಂತೆ ಚುರುಕಾಗಿರುವನು.ಕೆಲಸಕ್ಕೆ ಜನ ಕಡಿಮೆಯೆ ? ಅಂಥ ಕಾಲ ಬಂದರೆ ಹೇಗೂ ನಾವಿಬ್ಬರಿದ್ದೇವೆ. ಮರಕಡಿಯುವುದಕ್ಕೆ ಚಿನ್ನದ ಕೊಡಲಿ ಮಾಡಿಸಬೇಕೆ ?ನನಗಂತು ರನ್ನನನ್ನು ನೋಡಿದರೆ ನಾಳೆ ಹೆಸರು ತರುವಂಥ ಹುಡುಗನಾಗಿ ಕಾಣುವನು”ಎಂದು ಅತ್ತಿಮಬ್ಬೆ ರನ್ನನ ಪರವಾಗಿ ವಾದಿಸಿದಳು.

“ರಮಣಿ, ರನ್ನನನು ನಮ್ಮ ಹುಡುಗ ಅಂತ ಹೇಳಿ ಗುರುಕುಲಕ್ಕೆ  ಸೇರಿಸಲು ಹೋದರೆ ನಮ್ಮ ಅಂತಸ್ತಿಗನುಣವಾಗಿ ಗುರುಕುಲಕ್ಕೆ ದಾನ ಮಾಡಬೇಕಾಗುವುದು. ನಾಳೆ ಅವನ ಓದಿಗಾಗಿ ಹೇರಳವಾಗಿ ದ್ರವ್ಯ ಬೇರೆ ಖರ್ಚಾಗುವುದು.

“ಅಲ್ಲ ಗುರುಕುಲಕ್ಕೆ ದಾನಕೊಡುವ ಅವಕಾಶ ಈ ಹುಡುಗನಿಂದ ಬರುವುದಾದರೆ ಅದಕ್ಕಿಂತ ಭಾಗ್ಯ ಇನ್ನೊಂದು ಇದೆಯೆ ? ಹಣ ಎಷ್ಟು ಬೇಕಾದರೂ ತಾವು ಯೋಚಿಸ ಬೇಡಿ. ಹಣದ ವಿಷಯ ನನಗಿರಲಿ. ಮಾವನವರಿಗೆ ಹೇಳಿ ರನ್ನನನ್ನು ಗುರುಕುಲಕ್ಕೆ ಸೇರಿಸುವ ಭಾರ ತಮ್ಮದು”ಎಂದು ಅತ್ತಿಮಬ್ಬೆ ಮಾರ್ಗದರ್ಶನ ಮಾಡಿದಳು.

“ಅಲ್ಲ ದಾರಿಯಲ್ಲಿ ಹೋಗುವ ಮಕ್ಕಳನ್ನೆಲ್ಲ ಉದ್ಧರಿಸಲು ಹೋಗುತ್ತಿರುವೆಯಲ್ಲ.ಏನಾದರೂ ಹತ್ತಿರದ ಬಂಧುವೆ, ಹೋಗಲಿ ಕರುಳುಬಳ್ಳಿಯೆ ! ಆ ದಿನ ನೀರು ಸೇದಲೆಂದು ಕರೆದುತಂದ ಹುಡುಗನನ್ನೂ ಓದಿಕೋ ಹೋಗು ಎಂದು ನೀನೇ ಹಣಕೊಟ್ಟು ಸಾಗುಹಾಕಿದೆ. ಈಗ ಮತ್ತೊಮ್ಮೆ ಅದೇ ಪ್ರಕರಣ. ಅವತ್ತಾದರೋ ಅಷ್ಟೋ ಇಷ್ಟೋ ಹಣ ಕೊಟ್ಟೆ ಅನಂತರ ಕೈಬಿಟ್ಟೆ. ಈಗ ಇಡೀ ಜವಾಬ್ದಾರಿಯನ್ನು ಹೊರಬೇಕೆಂದಿರುವೆ. ನಾನು ಹೇಳಿದರೂ ನಮ್ಮ ತಂದೆ ಏನು ತಿಳಿದುಕೊಳ್ಳುವರೋ ಏನೋ ?” ಎಂದು ನಾಗದೇವ ಸಂದೇಹದಿಂದ ತಿಳಿಸಿದನು.

“ರತ್ನದಂಥ ಮಕ್ಕಳನ್ನು ಓದುವ ಕಾಲದಲ್ಲಿ ಬಿಡಿಸಿ ಅಂಥ ಇಂಥ ಕೆಲಸದಲ್ಲಿಟ್ಟರೆ ಅವರ ಬಾಳೇ ಹಾಳಾಗುವುದಲ್ಲ ! ತಮ್ಮನ್ನೇ ತೆಗೆದುಕೊಳ್ಳಿ, ಬಾಲ್ಯದಲ್ಲಿ ಸರಿಯಾದ ಅನಕೂಲ ಸಿಗದೇ ಹೋಗಿದ್ದರೆ ತಾವು ಈದಿನ ಸೇನಾಧಿಪತಿಯಾಗಿ ಇರುತ್ತಿದ್ದಿರೇನು ?”

“ಅತ್ತಿ, ನಾನು ಸೇನಾಧಿಪತಿ ಆಗಿದ್ದರೂ ಅಷ್ಟೋ ಇಷ್ಟೋ ಓದಿ ಬುದ್ಧಿವಂತನಗದೆ ಹೋಗಿದ್ದರೆ ನೀನೂ ಗುಂಡೂ ನನ್ನನ್ನು ಎಲ್ಲಿ ಒಪ್ಪುತ್ತಿದ್ದಿರಿ ?” ಎಂದು ನಾಗದೇವ ಫಕ್ಕನೆ ನಕ್ಕನು.

“ತಮ್ಮಂತೆ ಉಳಿದವರೂ ಎಂದು ಭಾವಿಸಬೇಕು. ಅನುಕೂಲಮಾಡಿಕೊಡೋಣ. ಅನಂತರ ಅವರವರ ಯೋಗ.”

“ಅತ್ತಿ. ಆ ಮುಗುವಿನ ಮೇಲೆ ನಿನಗೆ ಬಹಳ ಮರುಕವಾಗಿದೆಯಲ್ಲ. ದತ್ತು ತೆಗೆದುಕೊಂಡುಬಿಡು.”

“ತಾವು ಒಪ್ಪಿದರೆ ನಾನು ಅದಕ್ಕೂ ಸಿದ್ಧ.”

“ನಮಗೇನು ಮಕ್ಕಳೇ ಆಗುವುದಿಲ್ಲವೆ ?”

“ಈಗ ನನು ಹಾಗನ್ನಲಿಲ್ಲವಲ್ಲ.”

“ ಮತ್ತೆ ದತ್ತು ತೆಗೆದುಕೊಳ್ಳೋಣ ಅಂದೆ.”

“ಬುದ್ಧಿವಂತರಾದ ಮಕ್ಕಳನ್ನು ಕಂಡರೆ ಯಾರಿಗೆ ತಾನೇ ಮೋಹವಾಗದು ! ಅವೆಲ್ಲ ರಾಷ್ಟ್ರದ ಅನರ್ಘ್ಯ ರತ್ನಗಳು ! ನಾಳೆ ಏನಾಗುವುವೋ ಕಂಡವರಾರು? ”

“ಅತ್ತಿ. ನಿನ್ನ ಮಾತಿಗೆ ಪ್ರತಿ ಇಲ್ಲ. ಸ್ವಲ್ಪ ಅವನನ್ನು ಪರೀಕ್ಷಿಸಿ ನೋಡುವೆನು. ನನಗೆ ಸರಿಕಂಡುಬಂದರೆ ಅವನು ಕವಿಚಕ್ರವರ್ತಿಯಾಗುವ ತನಕ ಕೈ ಹಿಡಿದೇನು !” ಎಂದು ನಾಗದೇವ ಮಾತುಕೊಟ್ಟನು. ಅತ್ತಿಮಬ್ಬೆಗೆ ಪರಮಾನಂದವಾಯಿತು.

ರನನಿಗೆ ಮನೆಯಲ್ಲಿ ಅಕ್ಷರಾಭ್ಯಾಸವಗಿತ್ತು. ಅವರಿವರನ್ನು ಬೇಡಿ ಓಲೆಗ್ರಂಥಗಳನ್ನು ತಂದು ಕೈಕುದುರಲೆಂದು ಪ್ರತಿಯೆತ್ತುತ್ತಿದ್ದನು. ಎತ್ತಿದ ಪ್ರತಿಗಳನ್ನು ಹಾಗೇ ಓದಲು ಪ್ರಯತ್ನಿಸುತ್ತಿದ್ದನು. ಪಂಪ ಪೊನ್ನರ ಗ್ರಂಥಗಳನ್ನು ರನ್ನ ಪ್ರತಿ ಮಾಡಿ ಕೊಂಡು ಆಗಾಗ ಅವುಗಳ ಮೇಲೆ ಕಣ್ಣಾಡಿಸುತ್ತ ಹಗಲುಗನಸು ಕಾಣುತ್ತಿದ್ದನು. ವಿದ್ಯೆಗೆ ಈಗಿನಂತೆ ಅನುಕೂಲವಿಲ್ಲದ ಆ ಕಾಲದಲ್ಲಿ ವಿದ್ಯಾವಂತರ

ಸಂಖ್ಯೆ ತೀರಾಕಡಿಮೆ. ವಿದ್ವಾಂತರೆಲ್ಲ ಅಂದು ರಾಜಮಹಾರಾಜರ ಆಶ್ರಯ ಪಡೆದು ಪಟ್ಟಣ ಗಳಲ್ಲಿರುತ್ತಿದ್ದರು. ರನ್ನನ ವಿದ್ಯಾದಾಹವನ್ನು ತೀರಿಸುವಂಥ ಉಪಾಧ್ಯಾಯರು ಮುದುವೊಳಲ್ಲಿ ಎಲ್ಲಿ ಬರಬೇಕು ? ಜತೆಗೆ ಕಡುಬಡವನಾದ ಜೀನೇಂದ್ರವಲ್ಲಭ ತನ್ನ ನೂರೊಂದು ತಾಪತ್ರಯಗಳಲ್ಲಿ ಮಗನ ದಾಹವನ್ನು ತೀರಿಸಲು  ಹಣವೆಲ್ಲಿ ತರಬೇಕು."

ನಾಗದೇವ ರನ್ನನನ್ನು ಪರೀಕ್ಷಿಸಿದನು ತಾನೇ ಕೈಯಾರೆ ಪ್ರತಿ ಮಡಿದ್ದ ಆದಿ ಪುರಾಣ, ವಿಕ್ರಮಾರ್ಜುನವಿಜಯ, ಭುವನೈಕೆ ರಾಮಾಭ್ಯುದಯ ಮತ್ತು ಶಾಂತಿ ಪುರಾಣವನ್ನು ರನ್ನ ತೋರಿಸಿದಾಗ ನಾಗದೇವನಿಗೂ ಆಶ್ಚರ್ಯವಾಯಿತು. ಮುತ್ತಿನಂಥ ಅಕ್ಷರ ! ಮೊದಲಿಂದ ಕೊನೆತನಕ ಅಂತರ  ಏರುಪೇರಾಗದೆ ಸಾಗಿರುವ ಪಂಕ್ತಿಗಳು ! ರನ್ನನ ಕೈಲಿ ಓದಿಸಿ ನೋಡಿದನು. ಸಿಂಹಗರ್ಜನೆಯಂಥ ಅವನ ಕಂಠಶ್ರೀಯನ್ನು, ಆಲಿಸಿದಾಗ ನಾಗದೇವೆ  ಬೆರಗಾದನು. ಇವನು ಒರಟರಮಲ್ಲನಾದರೂ ರಸಿಕ. ಕತ್ತಿ ಗುರಾಣಿ, ಬಿಲ್ಲುಬಾಣ, ಗದೆ ಇವುಗಳ ಮೇಲೆ ಈತನಿಗೆಷ್ಟು ಪ್ರೇಮವೋ ಕಾವ್ಯಗಳ ಮೇಲ್ಲೂ ಅಷ್ಟೇ ಪ್ರೇಮವಿತ್ತು. ವೀರಸರ ಪ್ರಧಾನವಾದ ಕಾವ್ಯವಾದರಂತೂ ನಾಗದೇವ ರಾತ್ರಿಯೆಲ್ಲ ಕುಳಿತು ವೀರಾವೇಶದಿಂದ ಓದಿ ಮುಗಿಸುತ್ತಿದ್ದನು. ಪಂಪ ನನ್ನೂ ಪೊನ್ನನನ್ನೂ ತಲೆದಿಂಬಿನ ಅಡಿ ಇಟ್ಟುಕೊಂಡೇ ನಿದ್ರಿಸುತ್ತಿದ್ದನು. ರಣ ಭೂಮಿಗೂ ಕನ್ನಡ ಕಾವ್ಯಗಳನ್ನು ಕೊಂಡು ಹೋಗುತ್ತಿದ್ದನು. ಅವಕಾಶ ಸಿಕ್ಕಿದಾಗ ಸೈನಿಕರನ್ನು ಕೂರಿಸಿಕೊಂಡು ವೀರರಸ ಪ್ರಧಾನವಾದ ಭಾಗಗಳನ್ನು ಹಾಡಿ ವ್ಯಾಖ್ಯಾನ ಮಾಡುತ್ತಿದ್ದನು. ಕರುಬಿಲ್ಲದ ಕಡುಗಲಿಯಾದ ನಾಗದೇವನಿಗೆ ರನ್ನನ ರೂಪು. ಆಕಾರ. ದಿಟ್ಟತನ, ಓದಿ ಏನು ಪ್ರಖ್ಯಾತಿಗೆ ಬರಬೇಕೆಂಬ ಛಲ ಇವನ್ನು ಕಂಡು ಮೆಚ್ಚಿಗೆಯಾಯಿತು.

"ರನ್ನ , ಓದಿ ಏನು ಮಾಡುವೆ ತಮ್ಮ. ಸುಮ್ಮನೆ ನನ್ನ ಜೊತೆಯಲ್ಲೇ ಇದ್ದು ಬಿಡು. ನಿನಗೆ ಸೈನ್ಯದಲ್ಲಿ ಕೆಲಸಕೊಡಿಸುವೆನು. ಕ್ರಮೇಣ ಸೇನಾಧಿಪತಿಯಾಗುವಿಯಂತೆ" ಎಂದು ಉಬ್ಬಿಸಿದನು.

"ಮೊದಲು ಓದಬೆಕು, ಅನಂತರ ಏನದರೂ ಮಾಡಿ. ನನ್ನ ಹೆಸರು ರನ್ನ. ಹೆಸರಿಗಾದರೂ ಬೆಲೆ ಬೇಡವೇ?" ಎಂದು ದಿಟ್ಟನಾಗಿ ನುಡಿದನು.

"ನಿನಗೆ ಓದುವುದಕ್ಕೆ ಅನಕೂಲ ಎಲ್ಲಿದೆ. ಮಗು?"

“ ಅನುಕೂಲ ಏಕಿಲ್ಲ. ತಮ್ಮ ಕಾಲೇ ಕಟ್ಟುವೆನು” ಎಂದು ರನ್ನ ಚಂಡಿಹಿಡಿದನು. ನಾಗದೇವ ಅವನನ್ನು ಬೀಳ್ಕೊಟ್ಟು ದಲ್ಲಪನನ್ನು ಕಂಡು ರನ್ನನು ಪ್ರತಿ ಎತ್ತಿರುವ ಗ್ರಂಥಗಳನ್ನು ನೋಡಿಸಿದನು. ದಲ್ಲಪ ಸಹೃದಯ.ಅವನ ಮನಸ್ಸೂ ಕರಗಿತು.

“ ಮಗು, ಈ ಹುಡುಗನನ್ನು ಓದಿಸುವುದಾದರೆ ನನ್ನದೇನ್ನೂ ಅಭ್ಯಂತರವಿಲ್ಲ. ಅನುಕೂಲವಿಲ್ಲದೆ. ಎಷ್ಟು ಜನ ಬಡಮಕ್ಕಳು ಕಾಡು ಬೆಳದಿಂಗಳಾಗುವುವೋ ಏನೋ” ಎಂದು ದಲ್ಲಪ ಚಿಂತಾಕ್ರಾಂತನದನು.

ದಲ್ಲಪನ ಮನೆಗೆ ರನ್ನ ಬಂದು ಒಂದು ವಾರ ಕಳೆಯಿತು. ರನ್ನನ ಗ್ರಹಗತಿ ಸರಿ ಹೋಯಿತೋ ಏನೋ,ಈ ಸಮಯಕ್ಕೆ ಸರಿಯಾಗಿ ಪಂಪ ಕವಿಯೂ ದಲ್ಲಪನ ಮನೆಗೆ ಅಗಮಿಸಿದನು. ಉಟೋಪಚಾರಗಳಾದ ಮೇಲೆ ಪಂಪಮಹಾಕವಿ ಲೋಕಾಭಿರಾಮವಾಗಿ ಮಾತಾಡುವಾಗ ದಲ್ಲಪ. ರನ್ನನನ್ನು ಕರೆಸಿ ಆತನಿಗೆ ಪರಿಚಯಮಾಡಿಕೊಟ್ಟನು. ಪರಶುರಾಮ ಮೊಟ್ಟ ಮೊದಲು ಶ್ರೀರಾಮನನ್ನು ಕಂಡು ಮೆಚ್ಚಿಕೊಂಡಂತೆ ಪಂಪನೂ ರನ್ನನನ್ನು ಕಂಡು ಮೆಚ್ಚಿದನು. ಹತ್ತಿರ ಕೂರಿಸಿಕೊಂಡು ಅವನ ಮೈದಡವಿ ಮುದ್ದಿಸಿದನು. ಪಂಪನ ಹಸ್ತಸ್ಪರ್ಶವಾಗುತ್ತಿದ್ದಂತೆ ರನ್ನನ ಅಂತರಂಗಕ್ಕೆ ಸ್ಪರ್ಶಮಣಿ ತಾಕಿ ದಂತಾಯಿತು !

“ದಲ್ಲಪ, ಈ ಮಗವನ್ನು ಬಂಕಾಪುರಕ್ಕೆ ಕಳಿಸಬಹುದಲ್ಲ. ಅಜಿತಸೇನಾಚಾರ್ಯರ ಪಾದಮೂಲದಲ್ಲಿ ಈ ಮಗು ಪ್ರಬುದ್ಧಮಾನಕ್ಕೆ ಬರಬಹುದು.”ಎಂದು ಸಲಹೆಯಿತ್ತನು.

“ಪಂಪದೇವ, ಇವನ ಮೇಲೆ ನಮ್ಮ ಅತ್ತಿಮಬ್ಬೆಗೆ ಪ್ರಾಣ. ತಾಪತ್ರಯಕ್ಕೆ ಸಿಕ್ಕಿ ಇವರ ತಂದೆ ಬಿಟ್ಟುಹೋದರು. ಅತ್ತಿಮಬ್ಬೆಯ ದೃಷ್ಟಿ ತಾಕುತ್ತಿದ್ದಂತೆಯೇ ಇವನು ಕವಿರನ್ನನಾಗಿರುವನು ! ಎಲ್ಲ ಇವನ ಅನುಕೂಲಕ್ಕೆ ಸರಿಯಾಗಿ ನಾಟಕೀಯವಾದ ಸಂದರ್ಭ ಏರ್ಪಟ್ಟಿದೆ. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಈ ಮಗುವಿಗೆ ಓದಿಗೆ ಆಗುವ ಖರ್ಚೆಲ್ಲ ತಮಗಿರಲೆಂದು ವಹಿಸಿಕೊಂಡಿರುವರು. ಅಷ್ಟೇಕೆ ನಮ್ಮ ನಾಗದೇವನೂ ರನ್ನನ ಪರ ವಹಿಸಿರುವನು. ಇದರ ಮೇಲೆ ನನ್ನ ಹೆಂಡತಿಯೂ ಇವನ ಪಕ್ಷವೇ ! ನೀವಾದರೂ ನನ್ನ ಪಕ್ಷಕ್ಕಿವಿರೆಂದು ಧೈರ್ಯವಾಗಿದ್ದೆ. ನೀವೂ ಕೈ ಕೊಟ್ಟಿರಿ !” ಎಂದು ದಲ್ಲಪಮುಗುಳ್ನಕ್ಕನು.

“ದಲ್ಲಪ, ನಿಮ್ಮ ಮನೆಯಲ್ಲಿ  ಎಲ್ಲರೂ ಪುಣ್ಯಾತ್ಮರಪ್ಪ” ಎಂದು ಪಂಪ ಆನಂದಾಶ್ರು ಹನಿಸಿದನು.

“ ನನ್ನೊಬ್ಬನನ್ನುಳಿದು” ಎಂದು ದಲ್ಲಪ ನಗೆಯಾಡಿದನು.

“ ತಾವು ಕಲ್ಪವೃಕ್ಷದ ತಾಯಿಬೇರು ! ಅದು ಗುಪ್ತವಾಗಿ ಮಣ್ಣಲ್ಲಿ ಅಡಗಿಹೋಗಿರುತ್ತದೆ. ಮೇಲಿನ ಚಿಗುರು ಹೂಗಳೆಲ್ಲ ತಮ್ಮ ಅಂದಚೆಂದವನ್ನು ಲೋಕಕ್ಕೆ ಪ್ರದರ್ಶಿಸಿ ಹಿಗ್ಗುತ್ತಿರುತ್ತವೆ.”ಎಂದು ಪಂಪ ಉಪಮೆಯಲೇ ದಲ್ಲಪನನ್ನೂ ಉಬ್ಬಿಸಿದನು.

“ಪಂಪದೇವ, ಮುಂದೆ ಈ ರನ್ನನೇ ತಮ್ಮ ಸಿಂಹಾಸನಕ್ಕೆ ಉತ್ತರಾಧಿಕಾರಿ !”ಎಂದು ದಲ್ಲಪ ಮುಗುಳ್ನಕ್ಕನು.

“ಹಾಗೇ ಆಗಲಿ. ಯಾರಾದರೂ ಮುಂದೆ ಬಂದು ನನ್ನ ಪೀಠವನ್ನು ಏರುವುದಾದರೆ ಸಂತೋಷವಾಗಿ ತೆರವುಮಾಡಿಕೊಡುವೆನು. ಈಗಾಗಲೇ ತೆರವುಮಾಡಿದ್ದೇನೆ. ಮುಂದೆ ಬರುವಾತನ ಹೆಸರಿನ ಪೀಠನಲ್ಲಿ ಪೀಠವನ್ನು ಒರೆಸಿ  ಅಣಿಮಾಡುತ್ತಿರುವೆನು. ಪಂಪನಾದ ಮೇಲೆ ಪೊನ್ನ, ಪೊನ್ನನಾದ ಮೇಲೆ ರನ್ನ, ರನ್ನನಾದ ಮೇಲೆ ಇನ್ನೊಬ್ಬ ಜನ್ನ ! ಹೀಗೇ ಸಾಗುವುದು. ಸರಸ್ವತಿ ಬಂಜೆಯಲ್ಲ ! ” ಎಂದು ಪಂಪ ಭವಿಷ್ಯವನ್ನು ನುಡಿದನು. ರನ್ನ ಮುಗ್ಧನಾಗಿ ಎಲ್ಲವನ್ನೂ ಕೇಳಿದನು.

ಜಿನೇಂದ್ರವಲ್ಲಭ ತನ್ನ ಹಿರಿಯ ಮಗನೊಡನೆ ದಲ್ಲಪನ ಮನೆಗೆ ಬಂದನು. ಊಟೋಪಚಾರ ಶ್ರೀಮಂತಿಕೆಯಲ್ಲೇ ಸಾಗಿತು. ಅನಂತರ ತಾಂಬೂಲ ಜಗಿಯಲು ದಲ್ಲಪ ಹಾಗೂ ಪಂಪದೇವ ಒರಗುದಿಂಬನ್ನುಒರಗಿ ಳಿತರು.ಜಿನೇಂದ್ರ ವಲ್ಲಭ ನನ್ನೂ ರಾಚಯ್ಯನನ್ನೂ ಬಳಿಗೆ ಕರೆದು,

“ಪಂಪದೇವ , ಇವರೇ ರನ್ನನ ತಂದೆ. ಇನ್ನೊಬ್ಬರು ರಾಚಯ್ಯ ರನ್ನನ ಅಣ್ಣ” ಎಂದು ದಲ್ಲಪ ಪರುಚಯ ಮಾಡಿಕೊಟ್ಟನು.

“ಜಿನೇಂದ್ರವಲ್ಲಭ, ಈ ಮಹನೀಯ ಸಂಸಾರ ಸಾರೋದಯನಾದ ಪಂಪ ಮಹಕವಿ. !” ಎಂದು ದಲ್ಲಪ ಹೇಳುತ್ತಿದ್ದಂತೆಯೇ ಜಿನೇಂದ್ರವಲ್ಲಭನ ತಲೆಬಾಗಿತು.ರಾಚ್ಯಯ ಭಾವವೇಶದಿಂದ

ಪಂಪನ ಆದಿ ಪುರಾಣದ ಹಾಗೂ ವಿಕ್ರಮಾರ್ಜುನ ವಿಜಯದ ಒಂದೊಂದು ಪದ್ಯ ಹಾಡಿ ಪಂಪನ ಕಾಲಿಗೆರಗಿದನು.

"ಜಿನೇಂದ್ರವಳಭ, ನಿಮ್ಮ ರಾಚಯ್ಯ ಒಳ್ಳೆ ರಸಿಕರಂತೆ ಕಾಣುವರಲ್ಲ" ಎಂದು ಪಂಪ ನಗೆಯಾಡಿದನು.

"ನಮ್ಮಲ್ಲಿ ಎಲ್ಲ ಇದೆ ಸ್ವಾಮಿ. ಆದರೆ ನಮ್ಮ ರಸಿಕತೆಯನ್ನು ಬಡತನ ಸುತ್ತುವರೆದು ಲೋಕಕ್ಕೆ ಕಾಣದಂತೆ ಮಾಡಿಬಿಟ್ಟಿದೆ !" ಎಂದು ಜಿನೇಂದ್ರವಲ್ಲಭ ಖಿನ್ನವಾಗಿ ನುಡಿದನು.

ಜಿನೇಂದ್ರವಲ್ಲಭ, ನಿಮ್ಮ ರನ್ನನನ್ನು ನಾವೇ ಇರಿಸಿಕೊಳ್ಳುತ್ತೇವೆ. ಆದರೆ ಒಂದು ಷರತ್ತು. ತಾವು ಎಷ್ಟು ದಿನ ತಮ್ಮ ಹುಡುಗನನ್ನು ನಮ್ಮಲೇ ಬಿಟಿರುವಿರಿ ? ಅದು ಮೊದಲು ತೀರ್ಮಾನವಾಗಬೇಕು"

"ತಮಗೆ ಸಾಕಾಗುವ ತನಕ ಇರಿಸಿಕೊಳ್ಳಿ ಸ್ವಾಮಿ."

"ಮಧ್ಯೆ ಬಂದು ಹುಡುಗನ ತಾಯಿ ಒಪ್ಪಲಿಲ್ಲ, ಕಳುಹಿಸಿಕೊಡಬೇಕು ಎಂದು ಬರಾತ ಮಡುವುದಿಲ್ಲ ತಾನೇ ?"

"ಸ್ವಾಮಿ , ಒಂದೇ ಮಾತು ಹೇಳುವೆನು. ರನ್ನ ಇನ್ನು ಮುಂದೆ ನಮ್ಮ ಮಗುವಲ್ಲ ತಮ್ಮ ಮಗು. ಏನದರೂ ಮಾಡಿಕೊಳ್ಳಿ" ಎಂದು ಜಿನೇಂದ್ರವಲ್ಲಭ ದೃಢವಾಗಿ ನುಡಿದನು.

"ರಾಚಯ್ಯ ನಿನ್ನದೇನೂ ಅಭ್ಯಂತರವಿಲ್ಲ ತಾನೆ ?" ಎಂದು ರಾಚಯನ್ನ ಕಡೆ ತಿರುಗಿ ದಲ್ಲಪ ಕೇಳಿದನು.

"ರನ್ನ ತಮ್ಮ ಮನೆಯಲ್ಲಿರುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ."

" ನೀವೇನೂ ಭಯಪಡಬೇಡಿ. ಇವರ ಸೊಸೆ ಅತ್ತಿಮಬ್ಬೆ ನೀವು ಅವನನ್ನು ಬಿಟ್ಟು ಹೋದಾಗಿನಿಂದ ತನ್ನ ಮಗುವೆಂದೇ ತಿಳಿದು ನೋಡಿಕೊಳ್ಳುತ್ತಿರುವರು" ಎಂದು ಪಂಪದೇವ ಅವರಿಗೆ ತಿಳಿಸಿ ರನ್ನ,ರನ್ನ ಕವಿರನ್ನ ಎಂದು ಕೂಗಿದನು ! ಕೂಗಿಯಾರೇ ನನ್ನ ವೇಷಭೂಷಣಗಳನ್ನು ತಂದೆಗೆ ತೋರಿಸೇನೆ ಎಂದು ರನ್ನ ಬಾಗಿಲಸಂದಿಯಲ್ಲಿ ಕಾಯುತ್ತಿದ್ದನು.ಇವರು ಕೂಗದೇ ಇದ್ದರೂ ಏನಾದರೂ ನೆಪಮಡಿಕೊಂಡು ನುಗ್ಗಲು ಸನ್ನದ್ಧನಾಗೇ ಇದ್ದನು. ಪಂಪ ಕೂಗಿದಾಗ ಎಳಗರುವಿಗೆ

ಹಸಿಹುಲ್ಲು ತೋರಿಸಿದಂತಾಯಿತು. ರನ್ನ ಠೀವಿಯಿಂದ ಅವರಲ್ಲಿಗೆ ಬಂದನು. ಹರಕಲು ಬಟ್ಟೆಯ ರನ್ನ ಈಗ ರಾಜಕುಮಾರನಗಿರುವನು ! ಹೊಸ ಬಟ್ಟೆ ಧರಿಸಿದನು. ಕಿವಿಯಲ್ಲಿ ಕರ್ಣಕುಂಡಲ, ಬೆರಳಲ್ಲಿ ಉಂಗುರ, ತಲೆಯಲ್ಲಿ ಕಲಾಬತ್ತಿನ ಕುಲಾವಿ ! ತಮ್ಮ ಮಗನನ್ನು ಕಂಡು ಜಿನೇಂದ್ರವಲ್ಲಭನಿಗೆ ಅನಂದತುಂಬಿ ಬಂದಿತು. ಹಾಗೇ ಬಾಚಿ ಮೇಲೆತ್ತಿ ಮುದ್ದಾಡಿದನು. ತನ್ನ ತೊಡೆಯ ಮೇಲೆ ಕೂರಿಸಿಕೊಂಡನು. ಅನಂತರ ರಚಯ್ಯನ ತೊಡೆಯಮೇಲೂ ಕೂರಿಸಿದನು. ಜಿನೇಂದ್ರವಲ್ಲಭನಿಗೆ ಆನಂದಾಶ್ರು ಹನಿಯಿತು. ರಾಚಯ್ಯನಿಗೆ ರೋಮಾಂಚನವಯಿತು.

"ಈಗ ಹೇಳೋ ಮಗ ನಮ್ಮ ರನನನ್ನು ಇಲ್ಲೇ ಬಿಡುವುದೋ ಅಥವಾ ಕರೆದು ಕೊಂಡು ಹೋಗುವುದೋ ಬೆಳೆಯುವ ಕಾಲದಲ್ಲಿ ಮಕ್ಕಳಿಗೆ ಹಾಲು ತುಪ್ಪ ಒಳ್ಳೆ ಆಹಾರ ಅತ್ಯಾವಶ್ಯಕ. ನಮ್ಮಲ್ಲಿ ಈಮಗು ಕುಡಿದುದೆಂದರೆ ಎದೆಹಾಲೇ" ಎಂದು ಜಿನೇಂದ್ರ ವಲ್ಲಭ ಕಂಬನಿ ಸೂಸಿದನು.

"ರಾಚಯ್ಯ. ನಿನ್ನ ತಮ್ಮನನ್ನು ಈದಲು ಬಂಕಾಪುರಕ್ಕೆ ಕಳಿಸುವೆವು. ನಾವಾಗಿ ನಾವು ಕರೆದುಕೊಂಡು ಹೋಗು ಎನ್ನುವ ತನಕ ನೀವಾರೂ ರನ್ನನ ತಂಟೆಗೆ ಬರಕೂಡದು. ಓದು ಅರ್ಧಂಬರ್ಧ ಆಗಲೇ ಕೂಡದು" ಎಂದು ದಲ್ಲಪ ಅಧಿಕಾರವಣಿಯಿಂದ ಹೇಳಿದಾಗ ರಾಚಯ್ಯನಿಗೆ ಅಂಗಯ್ಯಲ್ಲೇ ಆಗಸ ಕಂಡಷ್ಟು ಆನಂದವಾಯಿತು.

" ಸ್ವಾಮಿ, ಯಾವ ಗಳಿಗೆಯಲ್ಲಿ ಆ ನನ್ನ ತಾಯಿಗೆ ಬಳೇ ತೊಡಿಸಿದೆನೋ ಏನೋ.

ನನ್ನ ಗ್ರಹಚಾರ ತೀರಿದಂತೆ ಕಾಣುವುದು. ರನ್ನ ಇನ್ನು ತಮ್ಮ ಮಗುವೇ ಸ್ವಾಮಿ!" ಎಂದು ಜಿನೇಂದ್ರವಲ್ಲಭ ರನ್ನನನ್ನು ಎತ್ತಿ ದಲ್ಲಪನ ಕೈಗೆ ಕೊಟ್ಟನು. ದಲ್ಲಪ ಸಂತೋಷವಾಗಿ ರನ್ನನನ್ನು ಪಕ್ಕದಲ್ಲಿ ಕೂರಿಸಿಕೊಂಡು ಹಿಗ್ಗಿದನು. ತಾಯ್ಗರುಳಿಗೆ ಅವರ ಮಗು ಇವರ ಮಗು ಎಂಬ ಭೇದವಿರುತ್ತದೆಯೆ ?

"ಜಿನೇಂದ್ರವಲ್ಲಭ, ಈ ಥೈಲಿಯನ್ನು ತೆಗೆದುಕೊಂಡು ಹೋಗಿ" ಎಂದು ದಲ್ಲಪ ಬೊಗಸೆ ಹಣವನ್ನು ಜಿನೇಂದ್ರವಲ್ಲಭನಿಗೆ ಕೊಡಲು ಹೋದನು.

"ಸ್ವಾಮಿ, ನನಗೆ ತಮ್ಮಿಂದ ಹಣ ಬಾಕಿ ಏನೂ ಇಲ್ಲವಲ್ಲ. ನನ್ನ ಮಗನ ಜವಾಬ್ದಾರಿಯನ್ನೆಲ್ಲ ತಾವು ಹೊತ್ತಿರುವಿರಿ. ತಮ್ಮಿಂದ ನಮ್ಮ ವಂಶಕ್ಕೇನೆ ಕೀರ್ತಿ ಬಂದ ಹಾಗೆ ಆಯಿತು ! ಬಡವನ

ಗುಡಿಸಿಲಿಗೆ ಬಂಗಾರದ ಕಳಸವೇರಿಸಿರುವಿರಿ ! ನನಗೆ ಹಣ ಬೇಡಿ ಸ್ವಾಮಿ " ಎಂದು ಜಿನೇಂದ್ರವಲ್ಲಭ ದೈನ್ಯನಾಗಿ ನುಡಿದನು.

ಜಿನೇಂದ್ರವಲ್ಲಭ, ಮಂತ್ರಿಗಳ ಆಶೀರ್ವಾದವನ್ನು ನಿರಾಕರಿಸಬಾರದು, ತೆಗೆದು ಕೊಳ್ಳಿ" ಎಂದು ಪಂಪ ಬಲವಂತ ಮಾಡಿದ ಮೇಲೆ ಜಿನೇಂದ್ರವಲ್ಲಭ ರಾಚಯ್ಯನ ಮುಖ ನೋಡಿದನು. ರಾಚಯ್ಯ ಥೈಲಿಯನ್ನು ಭಕ್ತಿಯಿಂದ ಸ್ವೀಕರಿಸಿದನು.

"ಸ್ವಾಮಿ, ನವಿನ್ನು ಬರುವೆವು. ತಮಗೆ ನಮ್ಮ ವಂಶವೇ ಚಿರಋಣಿಯಾಗಿರುವುದು !" ಎಂದು ಜಿನೇಂದ್ರವಲ್ಲಭ ಕೃತಜ್ಞತೆಯ ಭಾರದಿಂದ ಬಾಗಿದನು.

"ಒಳ್ಳೆ ದಿನ ನೋಡಿಕೊಂಡು ರನ್ನನನ್ನು ಬಂಕಾಪುರಕ್ಕೆ ಕಳಿಸುವೆವು, ಬಿಟ್ಟುಬರಲು ನನ್ನಮಗ, ಸೊಸೆಯರೂ ಹೋಗಿಬರುವರು" ಎಂದು ಹೇಳಿ "ರನ್ನ ಒಳಗೆ ಹೋಗಿ ನಿಮ್ಮ ತಂದೆ ಊರಿಗೆ ಹೊರಟಿರುವುದನ್ನು ಅಕ್ಕನಿಗೆ ಹೇಳು" ಎಂದು ದಲ್ಲಪ ತಿಳಿಸಿದನು.

ರನ್ನ ಒಳಗೆ ಹೋಗಿ ಸುದ್ಧಿ ಮುಟ್ಟಿಸಿದನು. "ಅತ್ತಿ, ಏನಾದರೂ ಬಾಂಡ್ಲಿ ಸಾಮಾನು ಕಟ್ಟಿಕೊಡು ತಾಯಿ" ಎಂದು ಪದ್ಮಬ್ಬೆ ಸೊಸೆಗೆ ಹೇಳಿದಳು. ಆಕೆ ಉಗ್ರಾಣಕ್ಕೆ ಹೋದಾಗ ರನ್ನನೂ ಹಿಂಬಾಲಿಸಿದನು. ಒಂದು ದೊಡ್ಡ ಬುಟ್ಟಿಯಲ್ಲಿ ಪದಾರ್ಥಗಳನ್ನು ತುಂಬತ್ತ ಒಂದು ಥೈಲಿಯನ್ನೂ ಅದರಲ್ಲಿ ಅತ್ತಿಮಬ್ಬೆ ಇಳಿಬಿಟ್ಟಾಗ "ಅಕ್ಕ, ಥೈಲಿ ಏನಕ್ಕೆ ?" ರನ್ನ ಕುತೂಹಲದಿಂದ ಕೇಳಿದನು. ಥೈಲಿಯ ತುಂಬ ಹಣವಿದೆ ಮಗು. ಯಾರಿಗೂ ಹೇಳಬೇಡ. ನಿಮ್ಮ ತಾಯಿಗೆ ಇರಲಿ ಎಂದು ಇಟ್ಟಿರುವೆನು. ಬುಟ್ಟಿ ಜೋಪಾನವೆಂದು ನಿಮ್ಮ ಅಣ್ಣನಿಗೂ ತಂದೆಗೂ ಮರೆಯಲ್ಲಿ ತಿಳಿಸು" ಎಂದು ಹೇಳಿ ಬುಟ್ಟಿಯನ್ನು ತಾನೇ ಕೈಯಾರೆ ಹೊಲಿದು ರನ್ನನ ಕೈಗೆ ಕೊಟ್ಟಳು. ರನ್ನ ಅದನ್ನು ತೆಗೆದುಕೊಂಡು ಬಂದು ತನ್ನ ತಂದೆಯ ಕೈಗಿತ್ತು ಸುಮ್ಮನೆ ನಿಂತುಕೊಂಡನು.

"ನಮ್ಮನ್ನು ತುಸು ಸಾಗು ಕಳುಹಿಸುವಂತೆ ಜೊತೆಯಲ್ಲಿ ಬಾ ಮಗು" ಎಂದು ಜಿನೇಂದ್ರವಲ್ಲಭ ರನ್ನನನ್ನೂ ಕರೆದುಕೊಂಡು ಎಲ್ಲರಿಗೂ ನಮಸ್ಕರಿಸಿ ಹೊರೆಟನು. ಆ ವೇಳೆಗೆ ಪದ್ಮಬ್ಬೆ ಹೊರಗೆ ಬಂದು "ಏನೂ ಚಿಂತಿಸಬೇಡಿ ಅಣ್ಣ, ನಿಮ್ಮ ಮಗುವನ್ನು ವಿದ್ಯಾವಂತನನ್ನಾಗಿ ಮಾಡಿ ನಿಮ್ಮ ಮನೆಗೇ ಕಳುಹಿಸಿಕೊಡುವೆವು" ಎಂದು ಸಮಾಧಾನದ ಮಾತನ್ನು ಹೇಳಿದಳು.

"ಮಕ್ಕಳು ವಿದ್ವಾವಂತರಾದ ಮೇಲೆ ಯಾರ ಕೈಗೂ ಸಿಗುವುದಿಲ್ಲ ತಾಯಿ ! ತಮ್ಮ ಸೊಸೆಯರು ದಾನಚಿಂತಾಮಣಿಗಳು !ತಾವು ಸಂಯಕ್ತ್ವ ಚೂಡಾಮಣಿಗಳು ! ತಮ್ಮಂಥ ವರು ಮುಟ್ಟಿದ್ದೆಲ್ಲ ಚಿನ್ನವಾಗುವುದು !"ಎಂದು ಜಿನೇಂದ್ರವಲ್ಲಭ ಅವರನ್ನೆಲ್ಲ ಕೊಂಡಾಡಿ ಬೀಳ್ಕೊಂಡನು.ರನ್ನ ದಾರಿಯಲ್ಲಿ,

"ಅಪ್ಪಾಜಿ, ಬುಟ್ಟಿ ಜೋಪಾನ. ಎಲ್ಲಾದರೂ ಇಟ್ಟು ಮರೆತೀರ ! ಅಣ್ಣಾಜಿ, ಬುಟ್ಟಿ ಸದಾ ನಿನ್ನ ಬಳಿಯೇ ಇರಲಿ. ಅಪ್ಪಾಜಿ ಮರೆತರೂ ಮರೆಯಬಹುದು" ಎಂದು ಎಚ್ಚರಿಸಿದನು.

"ಯಾರು ತಮ್ಮ ಬುಟ್ಟಿಕೊಟ್ಟುದ್ದು ?" ಜಿನೇಂದ್ರವಲ್ಲಭ ಅಕ್ಕರೆಯಿಂದ ಕೇಳಿದನು.

" ದೊಡ್ಡಕ್ಕ ಕರಿದ ಪದಾರ್ಥಗಳನ್ನು ಇದರ ತುಂಬ ಹಾಕಿರುವರು. ಜೊತೆಗೆ ಏನೋ ಥೈಲಿ ಹಾಕಿದರು ! ಜೋಪಾನ ಅಂತ ಹೇಳಿ ಅನಂತರ ಕೊಡುಎಂದು ನನ್ನೊಡನೆ ಹೇಳಿದರು ಅಪ್ಪಾಜಿ."

'ಮನೆಯ ತುಂಬ ಧಾರಾಳಿಗಳೇ ! ಮಾವ ಕಲ್ಪವೃಕ್ಷ. ಅತ್ತೆ ಕಾಮಧೇನು ! ಸೊಸೆಯರು ಚಿಂತಾಮಣಿಗಳು ! ಅಮೃತದ ಮಳೆಗೆ ಸಿಕ್ಕಿಬಿದ್ದೆವು. ಈ ಹಾಳು ಮೈಗೆ ತಾಕದಿರಲೆಂದು ನಾವೆಷ್ಟೇ ಎಚ್ಚರವಾಗಿ ಕೊಡೆಹಿಡಿದರೂ ಎಲ್ಲೋ ಹನಿ ತೂರದಿರುವುದೇ !" ಎಂದು ಗೊಣಗಿಕೊಂಡು "ನಾಗದೇವರನ್ನು ನೊಡಲೇ ಇಲ್ಲವಲ್ಲ" ಎಂದು ಕೊರಗಿದಾಗ "ಅವರು ಕೈಗೆ ಸಿಗುವುದೇ ಕಷ್ಟ ಅಪ್ಪಾಜಿ . ಬಂದರೂ ಅವರಾಯಿತು ಅವರ ಕೋಣೆಯಯಿತು. ಅವರೂ ಒಳ್ಳೆಯವರೇ ಅಪ್ಪಾಜಿ" ಎಂದು ರನ್ನ ಹಿಗ್ಗಿನಿಂದ ನುಡಿದನು.

"ಕಾಮಧೇನುವಿನ ಮರಿಯೂ ಕಾಮಧೇನುವೇ ಇರಬೇಕು. ಕಲ್ಪವೃಕ್ಷದ ಬೀಜ ನಟ್ಟರೆ ಕಲ್ಪತರುವಲ್ಲದೆ ಬೇರೆ ಬಂದೀತೆ ? ರನ್ನ ,ನೀನು ತುಂಬಎಚ್ಚರಿಕೆಯಿಂದಿರ ಬೇಕು.ದೊಡ್ಡವರ ಸಹವಾಸ ತುಂಬ ಕಷ್ಟ. ಒಲಿದರೆ ವರ, ಮುಳಿದರೆ ಶಾಪ ! ಜೋಕೆ. ಇನ್ನು ಹಿಂದಕ್ಕೆ ಹೋಗು ಮಗು. ರಾಚಯ್ಯ ಇವನನ್ನು ಎತ್ತಿಕೊಂಡು ಹೋಗಿ ಮನೆಯವರೆಗೂ ಬಿಟ್ಟು ಬಾ. ನಾನು ಇಲ್ಲೇ ನಿಂತಿರುವೆನು"ಎಂದು ರನ್ನನನ್ನು ಕಳಿಸಿ ಕೊಟ್ಟನು. ಮಕ್ಕಳು ಹೋದ ದಿಕ್ಕನ್ನೇ ನೋಡತ್ತ "ಯಾವ ಕಾಲಕ್ಕೆ ಏನು ಯೋಗವೋ. ಬಳೆ ಸೆಟ್ಟಿಯಾಗಬೇಕಾಗಿದ್ದ ರನ್ನ ರಾಜಾಸ್ಥಾನದ ವಿದ್ಯಾವಂತರ ನಡುವೆ

ರನ್ನವಾಗಿ ಮೆರೆಯಬಹುದೋ  ಏನೋ" ಎಂದು ಜಿನೇಂದ್ರವಲ್ಲಭ ವಿಧಿಯ ಕೈವಾಡವನ್ನು ಅರ್ಥಮಾಡಿಕೊಳ್ಳಲಾರದೆ ಬೆರಗಾದನು.

ಬಂಕಾಪುರದ ಗುರುಕುಲದಲ್ಲಿ  ಸಡಗರವೋ ಸಡಗರ. ಸಹಸ್ರಾರು ಜನ ವಿದ್ಯಾರ್ಥಿಗಳಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆಯರು ಸೊಗಸಾದ ಔತಣ ಮಾಡಿಸಿದರು; ಅಜಿತಸೇನಚಾರ್ಯರಿಗೆ ಭಕ್ತಿಯಿಂದ ಆಹಾರದಾನವಿತ್ತರ ಮಹಾಮುನಿಯ ಸಾಮಾಯಿಕ ಮುಗಿದ ಮೇಲೆ ಅತ್ತಿಮಬ್ಬೆಯ ಬಳಗವೆಲ್ಲ ಮುನಿಯ ದರ್ಶನಕ್ಕೆ ಬಂದು ಬಬ್ಬರಾದ ಮೇಲೊಬ್ಬರಂತೆ ಮುನಿವೃಂದಕ್ಕೆ ವಂದಿಸಿ ಆಶೀರ್ವಾದ ಪಡೆದರು. ತಾರಾಗಣದ ನಟ್ಟನಡುವೆ ಅಜಿತಸೇನಚಾರ್ಯರು ಚಂದ್ರಬಿಂಬದಂತೆ ರಾರಾಜಿಸಿದರು ! ಬಂಕಾಪುರದ ಋಷ್ಯಾಶ್ರಮ ಕನ್ನಡನಾಡಿಗೇ ತಿಲಕಪ್ರಾಯವಾಗಿತ್ತು. ನೂರಾರು ಜನ ಸಾಧುಗಳೂ, ಆರ್ಯಿಕೆಯರೂ, ವಿದ್ವಾಂಸರೂ ಈ ಆಶ್ರಮದಲ್ಲಿದ್ದರು. ಸಹ ಸ್ರಾರು ಜನ ವಿದ್ಯಾರ್ಥಿಗಳು ಸರಸ್ವತಿಯ ಕೃಪಾಕಟಾಕ್ಷಕ್ಕಾಗಿ ಹಗಲಿಗರಳು ತಪವೆಸಗುತ್ತಿದ್ದರು. ಇವರ ಪಾದಾರವಿಂದಕ್ಕೆ ರಾಷ್ಟ್ರಕೂಟ ಸಾರ್ವಭೌಮ ಎರಗಿ ಪ್ರತಿವರ್ಷವೂ ಆಶ್ರಮದ ದಿನಚರಿಗಾಗಿ ಲಕ್ಷಾಂತರ ಹೊನ್ನು ಕೊಟ್ಟು ಆಶೀರ್ವಾದ ಪಡೆದು ಹೋಗುತ್ತಿದ್ದನು. ಗಂಗರ ಮಾರಸಿಂಹನೂ ಇದೇ ರೀತಿ ಆಶ್ರಮದ ಹಿತಚಿಂತಕನಾಗಿದ್ದನು. ಚಾಮುಂಡರಾಯನಂತೂ ಅಜಿತಸೇನರ ಪಟ್ಟದ ಶಿಷ್ಯನಾಗಿ ಹೋಗಿದ್ದನು.

"ಅಬ್ಬೆ , ನಮ್ಮ ಆಶ್ರಮವನ್ನು ಈ ದಿನ ತಾವು ಅರಮನೆ ಮಾಡಿ ಬಿಟ್ಟಿರುವಿರಿ !" ಎಂದು ಅಜಿತಸೇನರು ಅತ್ತಿಮಬ್ಬೆಯನ್ನು ಕುರಿತು ಪ್ರಶಂಸೆ ಮಾಡಿದರು.

"ಸ್ವಾಮಿ, ತಮ್ಮ ಪದಧೂಳಿಯ ಮುಂದೆ ನಮ್ಮ ಸಿರಿಸಂಪದವೇ !" ಎಂದು ಅತ್ತಿಮಬ್ಬೆ ಭಕ್ತಿಯಭರದಲ್ಲಿ ಅಜಿತಸೇನರ ಪದವನ್ನು ಮುಟ್ಟಿ ಅಲ್ಲಿಯ ಧೂಳನ್ನು ತೆಗೆದುಕೊಂಡು ತನ್ನ ಮಂಗಳ ಸೂತ್ರಕ್ಕೂ ತಾಕಿಸಿ ಪುಲಕಿತಳಾದಳು. ಗುಂಡುಮಬ್ಬೆಗೂ ಮುನಿಯ ಪಾದಧೂಳಿಯ ತಿಲಕ ತಿದ್ದುವುದನ್ನು ಅತ್ತಿಮಬ್ಬೆ ಮರೆಯಲಿಲ್ಲ. ಈಕೆಯ ಭಕ್ತಿಯಿದಿರು ಅಲ್ಲಿದ್ದ ಮುನಿತಿಲಕರೆಲ್ಲ ಕರಗಿ ಹೋದರು.

"ಅಮ್ಮಾಜಿ, ತಾವು ನಮ್ಮ ನಾಡಿನ ರಕ್ಷಾಮಣಿ ! ರಾಷ್ಟ್ರಕೂಟ ಸಾಮ್ರಾಟರಿಗೆ ಹೊಯ್ಕೈಯಾಗಿ ಆಶ್ರಮಕ್ಕೆ ಹೊನ್ನಿನ ರಾಶಿಯನ್ನು ದಾನವಾಗಿ ಕೊಟ್ಟಿರುವಿರಿ ! ಗಂಗರಜನಿಗೆ ಸರಿಮಿಗಿಲಾಗಿ ದಾನಮಾಡಿರುವಿರಿ !ದಾನಚಿಂತಾಮಣಿಯೆಂದರೆ ನೀವೇ ಸೈ !"ಎಂದು ಅಜಿತಸೇನರು ಆಕೆಯ ಅಜಿತಸೇನರು ಆಕೆಯನ್ನು ಕೊಂಡಾಡಿದರು.

"ಮಹಾರಾಜ್, ನಾನು ಏನೂ ತಿಳಿಯದ ಹೆಣ್ಣು . ಈ ಹಣವೆಲ್ಲ ನಮ್ಮ ಯಜಮಾನರದು. ದೊಡ್ಡ ಮನಸ್ಸು ಮಾಡಿ ಇವರೆಲ್ಲ ಒಪ್ಪಿದ್ದರಿಂದ ನಾನೂ ನನ್ನ ತಂಗಿಯೂ ತಂದಕೊಟ್ಟಿರುವೆವು" ಎಂದು ಅತ್ತಿಮಬ್ಬೆ ಕೃತಜ್ಞಳಾಗಿ ಗಂಡನ ಮುಖ ನೋಡಿದಳು.

"ಸ್ವಾಮೀಜಿ, ಈ ಹಣ ನಮ್ಮ ಮನೆಯದಲ್ಲ. ಆಕೆಯ ತೌರುಮನೆಯದು. ತಮಗೆ ಗೊತ್ತಿರುವಂತೆ ನಾವೆಲ್ಲ ಬಡವರು" ಎಂದು ನಾಗದೇವ ಸತ್ಯಾಂಶವನ್ನು ತಿಳಿಸಿದನು.

"ನಾನು ಗುಂಡು ಇಬ್ಬರೂ ಇವರ ಕೈಹಿಡಿದಂದೇ ನಮ್ಮ ಸ್ಥಿರ ಹಾಗೂ ಚರಸ್ವತ್ತುಗಳೆಲ್ಲ ಇವರದೇ ಅಲದೇ ಸ್ವಾಮಿ ?" ಎಂದು ಅತ್ತಿಮಬ್ಬೆ ತರ್ಕಬದ್ಧವಾಗಿ ವಾದಿಸಿದಳು.

"ಪಂಪದೇವ ಇವರು ಆದರ್ಶ ದಂಪತಿಗಳಪ್ಪ !" ಎಂದು ಅಜಿತಸೇನರು ಪಂಪನ ಕಡೆ ದೃಷ್ಟಿ ಹಾಯಿಸಿದರು.

"ಈ ದಂಪತಿಗಳು ಆದರ್ಶ ಅಷ್ಟೇ ಅಲ್ಲ ಸ್ವಾಮೀಜಿ ಇವರು ಸ್ಪರ್ಶದ ಮಣಿಗಳು !" ಎಂದು ಪಂಪ, ಕವಿಯ ಭಾಷೆಯಲ್ಲೇ ಉತ್ತರಕೊಟ್ಟನು.

"ಹೋಗಲಿ ತಾಯಿ, ರನ್ನ ನಿಮಗೇನಾಗಬೇಕು ?" ಅಜಿತಸೇನರು ಅತ್ತಿಮಬ್ಬೆಯನ್ನು ಕೇಳಿದರು.

"ನಮ್ಮ ಮಗು ಸ್ವಾಮಿ" ಎಂದು ಆಕೆ ಉತ್ತರವಿತ್ತಳು.

"ನಮಗೆ ಮಕ್ಕಳಾಗುವುವೋ ಇಲ್ಲವೊ ಎಂದು ರನ್ನನನ್ನು ದತ್ತು ತೆಗೆದುಕೊಂಡಿರು ವಳು ಸ್ವಾಮಿ !" ಎಂದು ನಾಗದೇವ ನಗೆಯಡಿದನು .

"ಹೌದೇ ತಾಯಿ?" ಎಂದು ಅಜಿತಸೇನರು ಗಂಭೀರವಾಗಿ ಆಕೆಯನ್ನು ನೋಡಿದರು. ಆಕೆಯ ಭಾವಾವಳಿಯನ್ನೂ ಭವಿಷ್ಯವನ್ನೂ ಬೆದಕಿ ನೋಡಿದರು.

“ಅವರಿಗೆ ಕುಶಾಲು ಸ್ವಾಮಿ ! ” ಅತ್ತಿಮಬ್ಬೆ ನಾಚಿಕೆಯಿಂದ ಮುದುರಿಕೊಂಡಳು.

“ಗುಂಡುಮಬ್ಬೆ, ರನ್ನನನ್ನು ದತ್ತು ತೆಗೆದುಕೊಂಡಿರುವುದು ನಿಜವೇ ತಾಯಿ !” ಎಂದು ಪ್ರಶ್ನಿಸಿದರು.

“ ಹಾಗೆಂದೇ ಇಟ್ಟುಕೊಳ್ಳಿ ಸ್ವಾಮಿ.” ಆಕೆ ಮುಕ್ತಾಯ ಹಾಡಿದಳು.

“ ಅತ್ತಿಮಬ್ಬೆ, ನಿಮಗೆ ಜಗದ್ ವಿಖ್ಯಾತವಾದ ಪುತ್ರರತ್ನ ಜನಿಸುವುದು. ಆ ವಿಚಾರ ಬಿಟ್ಟುಬಿಡಿ. ಈಗ ರನ್ನನನ್ನು ನಾವು ಸಾಣೆ ಹಿಡಿಯಬೇಕಾಗಿದೆ. ಅವನು ಮುಂದೆ ಏನಾಗಬೇಕೆಂದು ತಾವು ಬಯಸುವಿರಿ ?” ಎಂದು ಮುಖ್ಯ ಪ್ರಶ್ನೆಗೆ ಬಂದರು.

“ನನಗೇನು ತಿಳಿಯುತ್ತೇ ಸ್ವಾಮಿ ? ಅವನಿಗೆ ಯಾವುದರಲ್ಲಿ ಅಭಿರುಚಿಯಿದೆಯೋ ತಾವೇ ಪರೀಕ್ಷಿಸಿ ನಿರ್ಧರಿಸಬೇಕು” ಎಂದು ತಿಳಿಸಿ ಒಮ್ಮೆ ನಗದೇವನನ್ನೂ ಗುಂಡಮಬ್ಬೆಯನ್ನೂ ಈಕ್ಷಿಸಿದಳು.

“ನಮ್ಮ ಮಗು ಕವಿಯಾಗಬೇಕೆಂದು ಅಕ್ಕನ ಇಷ್ಟ ಸ್ವಾಮಿ” ಎಂದು ಗುಂಡುಮಬ್ಬೆ ಹಿಗ್ಗಿನಿಂದ ತಿಳಿಸಿದಳು.

“ಓಹೋ ! ಪಂಪ ಮಹಾಕವಿಯ ಉತ್ತರಧಿಕಾರಿಯಾಗಬೇಕೇನು ?” ಎಂದು ಅವರು ಸೋಜಿಗಗೊಂಡರು.

“ನಮ್ಮ ಪಂಪ ಮಾವನರಿಗೂ ವಯಸ್ಸಾಯಿತು ಸ್ವಾಮಿ. ಅವರ ನಂತರ ಕನ್ನಡ ಸಾಹಿತ್ಯ ಬಡವಾಗಬಾರದಲ್ಲ ! ನಮ್ಮ ರನ್ನನನ್ನು ಕವಿ ಚಕ್ರವರ್ತಿಯಾಗುವಂತೆ ಆಶೀರ್ವಾದ ಮಾಡಿ ಸ್ವಾಮಿ” ಎಂದು ಅತ್ತಿಮಬ್ಬೆ ತನ್ನ ಅಭೀಪ್ಸೆಯನ್ನು ತಿಳಿಸಿದಳು. ಮಹಾಮುನಿ, ರನ್ನನ ಮುಖವನ್ನು ನೋಡಿದರು. ತೂಗುವಂತೆ ಮಾಡಿ ನಸುನಕ್ಕರು ! ಅವನನ್ನು ಕರೆದುಕೊಂಡು ಹೋಗುವಂತೆ ಸಂಚಾಲಕರಿಗೆ ತಿಳಿಸಿದರು. ರನ್ನ ಅವರನ್ನು ಹಿಂಬಾಲಿಸಿದನು.

“ಅಬ್ಬೆ, ನಿನ್ನ ಕಂದ ಕವಿಚಕ್ರವರ್ತಿಯಾಗುವನು ! ನಿಶ್ಚಿಂತಳಾಗಿರು” ಎಂದು ಅಜಿತಸೇನಾಚಾರ್ಯರು ಭವಿಷ್ಯ ನುಡಿದರು.

“ಅಮ್ಮಯ್ಯ, ಅಜಿತತಸೇನಾಚಾರ್ಯರಿಗೆ ವಾಕ್‌ಸಿದ್ಧಿಯಿದೆ !ಅವರು ಹೇಳಿದಮೇಲೆ ಮುಗಿಯಿತು !” ಎಂದು ಪಂಪ ಗಂಭೀರವಾಗಿ ನುಡಿದನು.

“ಹೌದಮ್ಮ ನಮಗೆ ಎಲ್ಲ ಸಿದ್ಧಿಗಳೂ ಇವೆ. ಬುದ್ಧಿ ಮಾತ್ರ ತುಸ ಊನ ನೋಡಿ. ಪಂಪಕವಿಯೂ ಒಂದೆರಡು ತಿಂಗಳು ನನ್ನ ಶಿಷ್ಯರಾಗಿದ್ದರು.ಈಗ ಮಹಾಕವಿಯಾಗಿ ಕನ್ನಡಾಂಬೆಯ ಮಂಗಳಸೂತ್ರದ ನಟ್ಟನಡುವೆ ಕೀಲಿಸಿದ ಧ್ರುವತಾರೆಯಾಗಿ ಕಂಗೊಳಿ ಸುತ್ತಿರುವರು ! ನಾನು ಮಾತ್ರ ಇದ್ದಲೇ ಇದ್ದೇನೆ. ನೀನು ಹಾಗುಗುವೆ, ಹೀಗಾಗುವೆ ಎಂದು ಅವರಿವರಿಗೆ ಹೇಳುವುದರಲ್ಲೇ ನಾನು ಕಾಲಕಳೆದು ಬಿಟ್ಟೆ. ನಾನು ಮಾತ್ರ ಆ ಹೊತ್ತಿಗೂ ಹೀಗೇ ಈ ಹೊತ್ತಿಗೂ ಹೀಗೆಯೆ” ಎಂದು ಅಜಿತಸೇನರು ನಗೆಯಾಡಿದರು.

“ಸ್ವಾಮಿ, ಪಂಪ ಮಾವನನ್ನು ತಮ್ಮ ಶಿಷ್ಯ ಎಂದು ಒಪ್ಪಿಕೊಂಡಿರಲ್ಲ!” ಎಂದು ಅತ್ತಿಮಬ್ಬೆ ನಗುತ್ತ ಕೇಳಿದಳು.

“ಹೇಗೂ ನನ್ನ ಶಿಷ್ಯ. ಈಗ ಲೋಕವಿಖ್ಯಾತರಾಗಿ ಬಂದಿರುವರು. ಅವರ ಗುರು ಎಂದು ಹೇಳಿಕೊಂಡರೆ ನನಗೊಂದು ಕೋಡು ಬಂದಂತಲ್ಲವೇ ?” ಎಂದು ಅಜಿತ ಸೇನರು ಮುಗುಳ್ನಕ್ಕರು.

“ಸ್ವಾಮಿ ನಾನು ತಮ್ಮ ಶಿಷ್ಯ. ತಮ್ಮ ಶಿಷ್ಯನೇ ಇಷ್ಟು ಮೇಲಕ್ಕೆ ಬಂದಿರುವಾಗ ತಮ್ಮ ಸ್ಥಾನಮಾನ ಕೇಳಬೇಕೆ ? ಕವಿಚಕ್ರವರ್ತಿಗಳನ್ನು ತಾವು ಸೃಷ್ಟಿಸುತ್ತಿರುವಿರಿ !” ಎಂದು ಪಂಪಕವಿ ಮುಕ್ತಕಂಠನಾಗಿ ಕೊಂಡಾಡಿದನು.

ಅಜಿತಸೇನನರು ಭವ್ಯಾತ್ಮರು ಹೆಚ್ಚಿದಷ್ಟೊ ಉದ್ದೀಪನಗೊಂಡು ಭಗವದಾನಂದವನ್ನು ಅನುಭವಿಸುವರು. ಅತ್ತಿಮಬ್ಬೆಯ ಬಳಗದಿಂದಾಗಿ ಅವರ ಉತ್ಸಾಹ ಇಮ್ಮಡಿಸಿತು. ಕಾಮಧೇನು ತೊರೆಬಿಟ್ಟಂತೆ ಅಂದು ಧರ್ಮಾಮೃತವನ್ನು ಹರಿಸಿದರು !

ಈ ಮಹಿಗೆಲ್ಲಮಗ್ಗಳದ ದಾನಿಯನಗ್ರಣಿಮಾಡಿ ದಾನಚಿಂ
ತಾಮಣಿಯಂ ನೆಳಳ್ತೆ ವಡೆದೊಪ್ಪಮೆ ಸಾಲ್ಗು ಮದರ್ಕೆ ಮುನ್ನ ಚಿಂ
ತಮಣಿ ಕಾಮಧೇನು ಸುರಭೂರುಹಮೆಂಬಿವನೇಕೆ ಮಾಡಿದಂ
ತಾಮರಸೋದ್ಭವಂ ಜಡಜಜಂಗೆ ವಿವೇಕಮದೆಲ್ಲಿ ಬಂದುದೋ

ಫಳಲತಿಕೆ ಕಲ್ಪಲತಿಕೆಯ

ನಿಳಿಸಿ ಸವತ್ಸಾಮರೇಂದ್ರಧೇನುವ ಗುಣಮಂ
ತಳೆದಿಳೆಯೊಳ್ ನೆಗಳ್ದುದು ಪಡೆ
ವಳ ತೈಲನ ಜನನಿಯತ್ತಿಮಬ್ಬೆಯ ದಾನಂ

ಪದೆದೆರೆದರ್ಥಿಜನಕ್ಕಿ
ತ್ತುದೆ ಧನಮೀಯದುದೆ ಕೆಟ್ಟುದೆಂದರ್ಥಮನೀ
ವುದರಿಂ ತ್ವನ್ನಿಷ್ಟಂ ಯ
ನ್ನದೀಯತೇ ಎನಿಪುದತ್ತಿಮಬ್ಬೆಯ ದಾನಂ

ಕಲಿಯೆನೆ ನೆಗಳ್ದಳ್ ಕಸರವರ
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್
ಮೊಲೆವೊತ್ತ ತೈಲಜನನಿಯ
ಕೆಲದೊಳ್ ರಂಜಿಪರ ಮೀಸೆವೊತ್ತಣ್ಣಂಗಳ್